**ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು**

**ನಂ.16–ಡಿ, ದೇವರಾಜ ಅರಸು ಭವನ, 4ನೇ ಮಹಡಿ, ಮಿಲ್ಲರ್ ಟ್ಯಾಂಕ್ ಬಂಡ್ ಏರಿಯಾ, ವಸಂತ ನಗರ, ಬೆಂಗಳೂರು–52**

* * *

# 2017–18ನೇ ಸಾಲಿನ ಆಯವ್ಯಯ ವಿವರ ಹಾಗೂ ಕ್ರಿಯಾ ಯೋಜನೆ

* * *

ರಾಜ್ಯ ಸರ್ಕಾರವು 2017–18ನೇ ಸಾಲಿನ ಆಯವ್ಯಯದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ **ರೂ.36000.00ಲಕ್ಷಗಳನ್ನು** ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ, ರಾಷ್ಟ್ರೀಯ ನಿಗಮದ ಸಾಲದ ಕಂತುಗಳ ಮರುಪಾವತಿಗೆ ಒದಗಿಸಿದ ರೂ.1917.00ಲಕ್ಷಗಳನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಲ್ಲಿ ಒದಗಿಸಿರುತ್ತದೆ. ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ನವದೆಹಲಿ ಇವರು **ರೂ.3000.00ಲಕ್ಷಗಳನ್ನು** ಈ ನಿಗಮಕ್ಕೆ ಹಂಚಿಕೆ ಮಾಡಿರುತ್ತಾರೆ. ಹಾಗೂ ನಿಗಮದಲ್ಲಿ ಕಳೆದ ಸಾಲುಗಳ ಉಳಿಕೆ ಮೊತ್ತ ರೂ.150.00ಲಕ್ಷಗಳು ಮತ್ತು ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ಮಂಡಳಿಯು ನಿಗಮಕ್ಕೆ ಒದಗಿಸಿದ ಮೊತ್ತ ರೂ.2500.00ಲಕ್ಷಗಳು ಹೀಗೆ ಒಟ್ಟು **ರೂ.43567.00.ಲಕ್ಷಗಳಲ್ಲಿ 62619** ಹಿಂದುಳಿದ ವರ್ಗಗಳ ಜನರಿಗೆ ಸಾಲ ಮತ್ತು ಸಹಾಯಧನದ ಸೌಲಭ್ಯ ಒದಗಿಸಲು ಕ್ರಿಯಾ ಯೋಜನೆಯನ್ನು ರೂಪಿಸಿದೆ.

ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಒದಗಿಸಿದ ಲೆಕ್ಕ ಶೀರ್ಷಿಕೆವಾರು ಹಣದ ವಿವರ ಈ ಕೆಳಕಂಡಂತಿದೆ.

(ಲಕ್ಷ ರೂಗಳಲ್ಲಿ)

| ಕ್ರ. ಸಂ. | ಯೋಜನೆಯ ಹೆಸರು ಮತ್ತು ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿ ಒದಗಿಸಿರುವ ಹಣ |
|---|---|---|
| **1** | **2** | **3** |
| **I.** 1. | **ರಾಜ್ಯ ಸರ್ಕಾರದಿಂದ:** ಷೇರು ಬಂಡವಾಳ/ಸಾಲ ಯೋಜನೆಗಳ ಅನುಷ್ಠಾನ (4225–03–190–0–01) | 12500.00 |
| 2. | ಸಹಾಯ ಧನ (2225–03–190–0–04) | 23500.00 |
| 3. | ರಾಷ್ಟ್ರೀಯ ನಿಗಮಗಳಿಗೆ ಸಾಲದ ಮರುಪಾವತಿ ಕಂತಿನ ಮೊತ್ತ ಪಾವತಿಸಲು (2225–03–277–2–86) | 1917.00 |
| | **ಒಟ್ಟು** | **37917.00** |
| **II.** | ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ನೇರ ಸಾಲ ಯೋಜನೆಗಳು | 3000.00 |
| **III** | ಕಳೆದ ಸಾಲಿನ ಉಳಿಕೆ ಮೊತ್ತ ಮತ್ತು ಮರುಪಾವತಿ ಪುನರ್ ವಿನಿಯೋಗ | 150.00 |
| **IV** | ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ಮಂಡಳಿ ನಿಗಮಕ್ಕೆ ಒದಗಿಸಿರುವ ಮೊತ್ತ | 2500.00 |
| | **Grand Total (I+II+III+IV)** | **43567.00** |

# 2017–18ನೇ ಸಾಲಿನ ಕ್ರಿಯಾ ಯೋಜನೆ

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ | ಯೋಜನೆ/ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿ ಒದಗಿಸಿರುವ ಮೊತ್ತ | ಕಾರ್ಯಕ್ರಮದ ಹೆಸರು | ನಿಗದಿಪಡಿಸಿದ | | | ಭೌತಿಕ |
|---|---|---|---|---|---|---|---|
| | | | | ಸಹಾಯಧನ | ಸಾಲ | ಒಟ್ಟು | |
| 1 | ಷೇರು ಬಂಡವಾಳ 4225–03–190–0–06 | 12500.00 | 1. ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆ | 750.00 | 1500.00 | 2250.00 | 5000 |
| | | | 2. ಡಿ.ದೇವರಾಜ ಅರಸು ಸ್ವಯಂ ಉದ್ಯೋಗ ಸಾಲ | 1100.00 | 7300.00 | 8400.00 | 12700 |
| | | | 3. ಕಿರುಸಾಲ | 150.00 | 300.00 | 450.00 | 3000 |
| | | | 4. ಅರಿವು ಶೈಕ್ಷಣಿಕ ಸಾಲ | – | 3150.00 | 3150.0 | 4000 |
| | | | 5. ಎನ್.ಬಿ.ಸಿ.ಕಾರ್ಯಕ್ರಮಗಳಿಗೆ ನಿಗಮದ ಪಾಲಿನ ಮೊತ್ತ | – | 250.00 | 250.00 | |
| 2 | ಸಹಾಯಧನ 2225–03–190–0–04 | 23500.00 | 1. ಗಂಗಾ ಕಲ್ಯಾಣ ನೀರಾವರಿ ಯೋಜನೆ | 9500.00 | – | 9500.00 | 4531 |
| | | | 2. ಸಾಂಪ್ರದಾಯಿಕ ವೃತ್ತಿದಾರರ ಸಾಲ | 750.00 | – | 750.00 | 1000 |
| | | | 3. ಹಿಂದುಳಿದ ವರ್ಗಗಳ ವಿಧವೆಯರಿಗೆ ಆರ್ಥಿಕ ನೆರವು | 500.00 | – | 500.00 | 1250 |
| | | | 4. ಹಿಂದುಳಿದ ವರ್ಗಗಳ ನಿರುದ್ಯೋಗಿ ಯುವಕರಿಗೆ ವಾಹನ/ಟೂರಿಸ್ಟ್ ಟ್ಯಾಕ್ಸಿ ಖರೀದಿಸಲು | 3000.00 | – | 3000.00 | 1000 |
| | | | 5.ಸಾರಾಯಿ ಮಾರಾಟ ನಿಷೇಧಿದಂದ ನಿರುದ್ಯೋಗಿಗಳಾದವರಿಗೆ ಆರ್ಥಿಕ ನೆರವು | 1000.00 | – | 1000.00 | 2000 |

| | | | | | | | |
|---|---|---|---|---|---|---|---|
| | | | **6. 2017–18ನೇ ಸಾಲಿನ ಆಯವ್ಯಯ ಘೋಷಣೆಯ ಯೋಜನೆಗಳು.** | | | | |
| | | | **ಅ) ಮಡಿವಾಳ ಸಮುದಾಯದಗಳ ಅಭಿವೃದ್ಧಿಗಾಗಿ.** | | | | |
| | | | 1. ದೋಬಿ ವೃತ್ತಿ ಅಭಿವೃದ್ಧಿಗೆ | 200.00 | – | 200.00 | 250 |
| | | | 2. ಸ್ವಯಂ ಉದ್ಯೋಗ ಸಾಲ (ಮಹಿಳಾ ಸ್ವ ಸಹಾಯ ಗುಂಪುಗಳ ಮೂಲಕ) | 900.00 | – | 900.00 | 4500 |
| | | | 3. ಗಂಗಾ ಕಲ್ಯಾಣ ನೀರಾವರಿ ಯೋಜನೆ | 300.00 | | 300.00 | 140 |
| | | | 4. ಶೈಕ್ಷಣಿಕ ಸಾಲ ಯೋಜನೆ | 75.00 | | 75.00 | 100 |
| | | | 5. ಕೌಶಲ್ಯಾಭಿವೃದ್ಧಿ ತರಬೇತಿ | 25.00 | | 25.00 | 156 |
| | | | ಒಟ್ಟು | **1500.00** | – | **1500.00** | **5146** |
| | | | **ಆ) ಸವಿತಾ ಸಮಾಜದ ಅಭಿವೃದ್ಧಿಗಾಗಿ.** | | | | |
| | | | 1. ಕ್ಷೌರಿಕ ವೃತ್ತಿ ನಿರ್ವಹಿಸಲು ಆರ್ಥಿಕ ನೆರವು | 725.00 | – | 725.00 | 966 |
| | | | 2. ನಾಧಸ್ವರ ಮತ್ತು ಡೋಲು ಉಪಕರಣ ಕೊಂಡುಕೊಳ್ಳಲು ವೈಯಕ್ತಿಕ ಸಾಲ ಯೋಜನೆ. | 200.00 | – | 200.00 | 1142 |
| | | | 3. ಸ್ವಯಂ ಉದ್ಯೋಗ ಸಾಲ | 300.00 | – | 300.00 | 500 |
| | | | 4. ಗಂಗಾ ಕಲ್ಯಾಣ ನೀರಾವರಿ ಯೋಜನೆ | 100.00 | – | 100.00 | 45 |
| | | | 5. ಶೈಕ್ಷಣಿಕ ಸಾಲ ಯೋಜನೆ. | 75.00 | – | 75.00 | 100 |
| | | | 6. ತರಬೇತಿ ಕಾರ್ಯಕ್ರಮಗಳು. | | | | |
| | | | 1. ಬೇಸಿಕ್ ಸೌಂದರ್ಯ ವರ್ಧಕ ತರಬೇತಿ. | 75.00 | – | 75.00 | 1500 |
| | | | 2. ಕೌಶಲ್ಯಾಭಿವೃದ್ಧಿ ತರಬೇತಿ. | 25.00 | – | 25.00 | 165 |

| | | | | | | | |
|---|---|---|---|---|---|---|---|
| | | | **ಒಟ್ಟು** | **1500.00** | **–** | **1500.00** | **4418** |
| | | | **ಇ) ತಿಗಳ ಸಮಾಜದ ಅಭಿವೃದ್ಧಿಗಾಗಿ.** | | | | |
| | | | 1. ತರಕಾರಿ ಮತ್ತು ಹೂವು ಬೆಳೆಯುಲು/ ಮಾರಾಟ ಮಾಡಲು ಆರ್ಥಿಕ ನೆರವು | 725.00 | – | 725.00 | 1450 |
| | | | 2. ಸ್ವಯಂ ಉದ್ಯೋಗ ಸಾಲ ಯೋಜನೆ | 550.00 | – | 550.00 | 734 |
| | | | 3. ಗಂಗಾ ಕಲ್ಯಾಣ ಯೋಜನೆ | 100.00 | – | 100.00 | 37 |
| | | | 4. ಅರಿವು ಶೈಕ್ಷಣಿಕ | 100.00 | – | 100.00 | 147 |
| | | | 5. ಕೌಶಲ್ಯಾಭಿವೃದ್ಧಿ ತರಬೇತಿ ಯೋಜನೆ. | 25.00 | – | 25.00 | 156 |
| | | | **ಒಟ್ಟು** | **1500.00** | **–** | **1500.00** | **2524** |
| | | | **ಈ) ಕುಂಬಾರ ಸಮಾಜದ ಅಭಿವೃದ್ಧಿಗಾಗಿ.** | | | | |
| | | | 1. ಕುಂಬಾರಿಕೆ ವೃತ್ತಿ ನಿರ್ವಹಿಸಲು | 700.00 | – | 700.00 | 1400 |
| | | | 2. ಸ್ವಯಂ ಉದ್ಯೋಗ ಸಾಲ | 400.00 | – | 400.00 | 354 |
| | | | 3. ಗಂಗಾ ಕಲ್ಯಾಣ ನೀರಾವರಿ ಯೋಜನೆ | 300.00 | – | 300.00 | 136 |
| | | | 4. ಶೈಕ್ಷಣಿಕ ಸಾಲ ಯೋಜನೆ | 75.00 | – | 75.00 | 100 |
| | | | 5. ಕೌಶಲ್ಯಾಭಿವೃದ್ಧಿ ತರಬೇತಿ | 25.00 | – | 25.00 | 156 |
| | | | **ಒಟ್ಟು** | **1500.00** | **–** | **1500.00** | **2146** |
| | | | 7. ಯುವಶಕ್ತಿ ಸಶಕ್ತಿಕರಣ ಸಾಲ ಯೋಜನೆ | 500.00 | – | 500.00 | 1425 |
| | | | 8. ಉದ್ಯಮ ಶೀಲತಾ ತರಬೇತಿ | 250.00 | – | – | – |
| | | | **ರಾಜ್ಯ ಸರ್ಕಾರದ ಒಟ್ಟು** | **23500.00** | **12500.00** | **36000.00** | **50140** |

| | | | | | | | |
|---|---|---|---|---|---|---|---|
| 3 | | | ರಾಷ್ಟ್ರೀಯ ನಿಗಮದ ಮರುಪಾವತಿ ಕಂತಿನ ಮೊತ್ತ | – | – | 1917.00 | – |
| | | **37917.00** | **ಎಲ್ಲಾ ಒಟ್ಟು** | **23500.00** | **12500.00** | **37917.00** | **50140** |
| 4 | ಎನ್.ಬಿ.ಸಿ.ಎಫ್.ಡಿ.ಸಿ. ಯೋಜನೆಗಳು. | 3000.00 | ಅವಧಿ ಸಾಲ ಯೋಜನೆಗಳು | – | – | 1500.00 | 3708 |
| | | | ಮಹಿಳಾ ಸಮೃದ್ಧಿ ಯೋಜನೆ | – | – | 1500.00 | 4514 |
| | | | ಒಟ್ಟು | – | – | **3000.00** | **8222** |
| 5 | ಕರ್ನಾಟಕ ಅಲೆಮಾರಿ/ ಅರೆ ಅಲೆಮಾರಿ ಅಭಿವೃದ್ಧಿ ಮಂಡಳಿ ನಿಗಮಕ್ಕೆ ಒದಗಿಸಿರುವ ಮೊತ್ತ | **2500.00** | 1. ಸ್ವಯಂ ಉದ್ಯೋಗ ಸಾಲ ಯೋಜನೆ | 240.00 | 960.00 | 1200.00 | 2400 |
| | | | 2. ಮಹಿಳಾ ಸ್ವ ಸಹಾಯ ಗುಂಪುಗಳಿಗೆ ಆರ್ಥಿಕ ನೆರವು. | 89.70 | 224.30 | 314.00 | 897 |
| | | | 3. ಟೂರಿಸ್ಟ್ ಟ್ಯಾಕ್ಸಿ/ಸರಕು ಸಾಗಾಣಿಕೆ ವಾಹನ ಖರೀದಿಗೆ | 186.00 | – | 186.00 | 62 |
| | | | 2. ಅರಿವು ಶೈಕ್ಷಣಿಕ ಸಾಲ | – | 150.00 | 150.00 | 300 |
| | | | 3. ವೈಯಕ್ತಿಕ ಗಂಗಾ ಕಲ್ಯಾಣ ಯೋಜನೆ | 620.00 | – | 620.00 | 248 |
| | | | 4. ತರಬೇತಿ ಕಾರ್ಯಕ್ರಮ | 30.00 | – | 30.00 | 200 |
| | | | **ಒಟ್ಟು** | **1165.70** | **1334.30** | **2500.00** | **4107** |
| **6** | **ಕಳೆದ ಸಾಲುಗಳ ಉಳಿಕೆ ಮೊತ್ತದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆ** | **150.00** | **1. ಮಡಿವಾಳ ಸಮುದಾಯದ ನಿರುದ್ಯೋಗಿಗಳಿಗೆ ಬ್ಯಾಂಕ್ ಸಹಯೋಗದೊಂದಿಗೆ ವಾಹನ ಕೊಳ್ಳಲು ಆರ್ಥಿಕ ನೆರವು.** | – | 75.00 | 75.00 | **75** |
| | | | 2. ಲಾಂಡ್ರಿ ಘಟಕ ಸ್ಥಾಪಿಸಲು ಆರ್ಥಿಕ ನೆರವು | – | 70.00 | 75.00 | **75** |
| | – | **150.00** | **ಒಟ್ಟು** | | **150.00** | **150.00** | **150** |
| | – | **43567.00** | **ಎಲ್ಲಾ ಒಟ್ಟು** | **24590.00** | **14060.00** | **43567.00** | **62619** |

ವ್ಯವಸ್ಥಾಪಕ ನಿರ್ದೇಶಕರು.

## 2017–18ನೇ ಸಾಲಿನಲ್ಲಿ ನಿಗಮದಿಂದ ಅನುಷ್ಠಾನಗೊಳಿಸಲಾಗುವ ಯೋಜನೆಗಳು

### I. ರಾಜ್ಯ ಸರ್ಕಾರದ ಅನುದಾನದ ಯೋಜನೆಗಳು:

1. ಚೈತನ್ಯ ಸಬ್ಸಿಡಿ ಕಂ ಸಾಫ್ಟ್‌ಲೋನ್ ಯೋಜನೆ.
2. ಡಿ.ದೇವರಾಜ ಅರಸು ಸ್ವಯಂ ಉದ್ಯೋಗ ವೈಯಕ್ತಿಕ ಸಾಲ ಯೋಜನೆ.
3. ಕಿರು ಸಾಲ ಯೋಜನೆ.
4. ಅರಿವು ಶೈಕ್ಷಣಿಕ ಸಾಲ ಯೋಜನೆ.
5. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಬಡ್ಡಿರಹಿತ ಸಾಲ.
6. **ಗಂಗಾಕಲ್ಯಾಣ ನೀರಾವರಿ ಯೋಜನೆ**
   ಅ. ವೈಯುಕ್ತಿಕ ಕೊಳವೆಬಾವಿ/ತೆರೆದ ಬಾವಿ ನೀರಾವರಿ ಯೋಜನೆ
   ಆ. ಸಾಮೂಹಿಕ ಕೊಳವೆಬಾವಿ ನೀರಾವರಿ ಯೋಜನೆ
   ಇ. ಏತ ನೀರಾವರಿ ಯೋಜನೆ.
7. ಸಾಂಪ್ರದಾಯಿಕ ವೃತ್ತಿದಾರರ ಮತ್ತು ಕುಶಲ ಕರ್ಮಿಗಳಿಗೆ ಆರ್ಥಿಕ ನೆರವು.
8. ಮಡಿವಾಳ, ಸವಿತಾ ಸಮಾಜ, ಕುಂಬಾರ ಮತ್ತು ತಿಗಳ ಸಮುದಾಯದ ಅಭಿವೃದ್ಧಿ ಕಾರ್ಯಕ್ರಮಗಳು.
9. ಹಿಂದುಳಿದ ವರ್ಗಗಳ ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿ/ಸರಕು ಸಾಗಾಣಿಕೆ ವಾಹನ ಖರೀದಿಸಲು ಸಹಾಯಧನ ಯೋಜನೆ.
10. ಹಿಂದುಳಿದ ವರ್ಗಗಳಿಗೆ ಸೇರಿದ ವಿಧವೇಯರಿಗೆ ಆರ್ಥಿಕ ನೆರವು.
11. ಸಾರಾಯಿ ಮಾರಾಟ ನಿಷೇಧದಿಂದ ನಿರುದ್ಯೋಗಿಗಳಾದವರಿಗೆ ಆರ್ಥಿಕ ನೆರವು.
12. ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಯುವಜನರ ಆರ್ಥಿಕ ಸಶಕ್ತಿಕರಣಕ್ಕಾಗಿ ಕಾರ್ಯಕ್ರಮಗಳು.
13. ಉದ್ಯಮಾ ಶೀಲತಾ ತರಬೇತಿ ಕಾರ್ಯಕ್ರಮ
14. **ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ ಯೋಜನೆಗಳು.**

1. **ಅವಧಿಸಾಲ ಯೋಜನೆ**
   ಅ) ಕೃಷಿ ವಲಯ
   ಆ) ಸಣ್ಣವ್ಯಾಪಾರ
   ಇ) ಸೇವಾ ವಲಯ
   ಈ) ಸಾರಿಗೆ ವಲಯ
   ಉ) ಶೈಕ್ಷಣಿಕ ಸಾಲ (ಭಾರತದಲ್ಲಿ ಹಾಗೂ ವಿದೇಶದಲ್ಲಿ)
   ಊ) ನ್ಯೂ ಸ್ವರ್ಣಿಮಾ ಸಾಲ (ಮಹಿಳಾ ಯೋಜನೆ)
   ಋ) ಶಿಲ್ಪ ಸಂಪದ
   ೠ) ಸ್ವಯಂ ಸಕ್ಷಮ ಸಾಲ
   ಎ) ಮೈಕ್ರೋ ಫೈನಾನ್ಸ್
   ಏ) ಕೃಷಿ ಸಂಪದ

2. **ಮಹಿಳಾ ಸಮೃದ್ಧಿ ಯೋಜನೆ** (ಮಹಿಳಾ ಸ್ವಸಹಾಯ ಗುಂಪುಗಳಿಗೆ/ವೈಯಕ್ತಿಕ ಆರ್ಥಿಕ ನೆರವು)

15. **ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ಮಂಡಳಿ ಒದಗಿಸುವ ಮೊತ್ತದಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು.**

1. ಸ್ವಯಂ ಉದ್ಯೋಗ ಸಾಲ ಯೋಜನೆ
2. ಮಹಿಳಾ ಸ್ವ ಸಹಾಯ ಗುಂಪುಗಳಿಗೆ ಆರ್ಥಿಕ ನೆರವು.
3. ಟೂರಿಸ್ಟ್ ಟ್ಯಾಕ್ಸಿ/ಸರಕು ಸಾಗಾಣಿಕೆ ವಾಹನ ಖರೀದಿಗೆ ಸಹಾಯಧನ.
4. ಅರಿವು ಶೈಕ್ಷಣಿಕ ಸಾಲ ಯೋಜನೆ
5. ಗಂಗಾ ಕಲ್ಯಾಣ ನೀರಾವರಿ ಯೋಜನೆ
6. ತರಬೇತಿ ಕಾರ್ಯಕ್ರಮ

**15. ಕಳೆದ ಸಾಲುಗಳ ಉಳಿಕೆ ಮೊತ್ತದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು.**

1. ಮಡಿವಾಳ ಸಮಾಜದ ಸಮುದಾಯಗಳ ನಿರುದ್ಯೋಗಿಗಳಿಗೆ ಬ್ಯಾಂಕ್ ಸಹಯೋಗದೊಂದಿಗೆ ವಾಹನ ಕೊಳ್ಳಲು ಆರ್ಥಿಕ ನೆರವು.
2. ಲಾಂಡ್ರಿ ಘಟಕ ಸ್ಥಾಪಿಸಲು ಆರ್ಥಿಕ ನೆರವು.

## ಯೋಜನೆಗಳ ಸಂಕ್ಷಿಪ್ತ ವಿವರಗಳು ಹಾಗೂ ಅನುಷ್ಠಾನದ ವಿಧಿವಿಧಾನಗಳು

***ಸರ್ಕಾರದ ಆದೇಶ ಸಂಖ್ಯೆ: ಸಕಇ 573 ಬಿಸಿಎ 95 ದಿನಾಂಕ: 23/02/1996 ಪ್ರಕಾರ ನಿಗಮದ ಎಲ್ಲಾ ಯೋಜನೆಗಳಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ 1 ಮತ್ತು 2ಎಗೆ ಶೇ.70ರಷ್ಟು ಭೌತಿಕ ಹಾಗೂ ಆರ್ಥಿಕ ಮತ್ತು ಪ್ರವರ್ಗ 3ಎ &3ಬಿಗೆ ಶೇ.30ರಷ್ಟು ಮೀಸಲಾತಿಯನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು.***

### I. ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆ:

1. ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿ ಸೇರಿದವರಾಗಿರಬೇಕು ಹಾಗೂ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.40,000/-ಗಳು ಪಟ್ಟಣ ಪ್ರದೇಶದವರಿಗೆ ರೂ.55,000/-ಗಳ ಒಳಗಿರಬೇಕು.
2. ಬ್ಯಾಂಕ್‌ಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತದೆ.
3. ಸರ್ಕಾರದ ಆದೇಶ ಸಂಖ್ಯೆ: ಸಕಇ/165/ಬಿಎಂಎಸ್/2011 ದಿ: 28/07/2011ರನ್ವಯ ಯೋಜನೆಯಲ್ಲಿ ಹಿಂದುಳಿದ ವರ್ಗಗಳ ಜನರಿಗೆ ಗರಿಷ್ಠ ರೂ. 5.00ಲಕ್ಷಗಳವರೆಗೆ ಸಾಲ ಒದಗಿಸಲಾಗುವುದು.
4. ಸಹಾಯಧನ ಶೇ.30ರಷ್ಟು ಅಥವ ಗರಿಷ್ಠ ರೂ.10,000/-ಗಳು. ರೂ.1.00ಲಕ್ಷಕ್ಕಿಂತ ಹೆಚ್ಚಿನ ಸಾಲಕ್ಕೆ ಸಹಾಯಧನ ಲಭ್ಯವಿಲ್ಲ.
5. ರೂ.25000/-ಗಳ ವರೆಗಿನ ಸಾಲಕ್ಕೆ ನಿಗಮದಿಂದ ಶೇ.30ರಷ್ಟು ಸಹಾಯಧನ ಮಾತ್ರ ಹಾಗೂ ರೂ.25001/-ಗಳಿಂದ ರೂ. 1.00ಲಕ್ಷಗಳ ವರೆಗಿನ ಸಾಲಕ್ಕೆ ಶೇ.30ರಷ್ಟು ಗರಿಷ್ಠ ರೂ.10000/-ಗಳ ಸಹಾಯಧನ ಹಾಗೂ ಶೇ.20ರಷ್ಟು ಮಾರ್ಜಿನ್ ಹಣ. ರೂ.1,00,001/-ರಿಂದ ರೂ.5.00ಲಕ್ಷಗಳ ವರೆಗೆ ಶೇ.20ರಷ್ಟು ಗರಿಷ್ಠ ರೂ.1.00ಲಕ್ಷಗಳ ಮಾರ್ಜಿನ್ ಹಣ ಸಾಲ ಒದಗಿಸಲಾಗುವುದು.

6. ಮಾರ್ಜಿನ್ ಹಣಕ್ಕೆ ವಾರ್ಷಿಕ ಶೇ.4ರ ಬಡ್ಡಿದರ.
7. ಉಳಿಕೆ ಮೊತ್ತ ಬ್ಯಾಂಕ್ ಪಾಲಿನ ಸಾಲ ಹಾಗೂ ಬ್ಯಾಂಕ್‌ಗಳಲ್ಲಿ ವಿಧಿಸುವ ಚಾಲ್ತಿಯಲ್ಲಿರುವ ಬಡ್ಡಿದರ.
8. **ಸಾಲದ ಉದ್ದೇಶ:** ಕೃಷಿ ಅವಲಂಬಿತ ಚಟುವಟಿಕೆಗಳು, ವ್ಯಾಪಾರ, ಸೇವಾವಲಯ ಮತ್ತು ಸಾರಿಗೆ ವಲಯದ ಉದ್ದೇಶಗಳು.
9. ಮಾರ್ಜಿನ್ ಹಣ ಸಾಲದ ಮರುಪಾವತಿ ಬ್ಯಾಂಕ್ ನಿಗದಿಪಡಿಸಿದ ಕಂತುಗಳು/ನಿಗಮದ ಮಾರ್ಜಿನ್ ಹಣ ಸಾಲ ಮಂಜೂರಾತಿ ಆದೇಶದಲ್ಲಿ ನಿಗದಿಪಡಿಸಿದ ಕಂತುಗಳನ್ವಯ.
10. ಆಯಾ ಬ್ಯಾಂಕ್ ಶಾಖೆಗೆ ನಿಗಧಿಪಡಿಸಿದ ಗುರಿಗೆ 1:1.25 ಅನುಪಾತದಲ್ಲಿ ಅರ್ಜಿ ಶಿಫಾರಸ್ಸು ಮಾಡುವುದು.
11. ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆಯಲ್ಲಿ ಘಟಕ ವೆಚ್ಚ ರೂ.1.00ಲಕ್ಷಗಳ ಮಿತಿಯಲ್ಲಿ ಬ್ಯಾಂಕ್‌ಗಳು ಸಾಲ ಮಂಜೂರು ಮಾಡಿದಲ್ಲಿ ಶೇ.30ರಷ್ಟು ಗರಿಷ್ಠ ರೂ.10000/-ಗಳ ಸಹಾಯಧನ ಮಂಜೂರು ಮಾಡಬೇಕು. ಘಟಕ ವೆಚ್ಚ ರೂ.1.00ಲಕ್ಷಗಳಿಗೆ ಮೇಲ್ಪಟ್ಟಲ್ಲಿ ಶೇ.20ರಷ್ಟು ಮಾರ್ಜಿನ್ ಹಣ ಮಂಜೂರು ಮಾಡುವುದು. ಯಾವುದೇ ಕಾರಣಕ್ಕೂ ಬ್ಯಾಂಕ್ ಮಂಜೂರು ಮಾಡಿದ ಘಟಕ ವೆಚ್ಚವನ್ನು ಕಡಿಮೆ ಮಾಡಿ ಸಹಾಯಧನ ಲಭ್ಯವಾಗುವಂತೆ ಪ್ರಸ್ತಾವನೆ ಸಲ್ಲಿಸಬಾರದು. ಪ್ರಸ್ತಾವನೆಯೊಂದಿಗೆ ಬ್ಯಾಂಕ್ ಮಂಜೂರಾತಿ ಪತ್ರ/ಮಾರ್ಜಿನ್ ಹಣ ಕ್ಲೈಂ ಪತ್ರದ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಪ್ರಸ್ತಾವನೆಯೊಂದಿಗೆ ಸಲ್ಲಿಸುವುದು.
12. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 31 ಸಮನ್ವಯ 2013, ಬೆಂಗಳೂರು ದಿನಾಂಕ: 25/02/2013ರನ್ವಯ ಈ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿಯ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು.

**ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ-...... ರಲ್ಲಿ ಪುಟ ಸಂಖ್ಯೆ: ...........ರಿಂದ .......... ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ-........... ರಲ್ಲಿ ಪುಟ ಸಂಖ್ಯೆ: ........... ರಲ್ಲಿ ಇರಿಸಿದೆ.**

## II. ಡಿ.ದೇವರಾಜ ಅರಸು ಸ್ವಯಂ ಉದ್ಯೋಗ ವೈಯಕ್ತಿಕ ಸಾಲ ಯೋಜನೆ:

1. ಹಿಂದುಳಿದ ವರ್ಗಗಳ ಜನರು ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ಚಟುವಟಿಕೆಗಳಿಗನುಸಾರ ಈ ಕೆಳಕಂಡಂತೆ ಸಾಲ ಮತ್ತು ಸಹಾಯಧನ ಸೌಲಭ್ಯವನ್ನು ಒದಗಿಸಲಾಗುವುದು.

   1. ಘಟಕ ವೆಚ್ಚ ರೂ.50,000/-ಗಳಿಗೆ ಶೇ.30 ರಷ್ಟು ಗರಿಷ್ಠ ರೂ.10,000/-ಗಳ ಸಹಾಯಧನ ಉಳಿಕೆ ಶೇ.70ರಷ್ಟು ರೂ.40,000/-ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.
   2. ಘಟಕ ವೆಚ್ಚ ರೂ.50.001/-ರಿಂದ ರೂ.1,00,000/-ಗಳವರೆಗೆ ಶೇ.20 ರಷ್ಟು ಗರಿಷ್ಠ ರೂ.20,000/-ಗಳ ಸಹಾಯಧನ ಉಳಿಕೆ ಶೇ.80ರಷ್ಟು ರೂ.80,000/-ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.

3. ಘಟಕ ವೆಚ್ಚ ರೂ.1,00,001/-ರಿಂದ ರೂ.2,00,000/-ಗಳವರೆಗೆ ಶೇ.15 ರಷ್ಟು ಕನಿಷ್ಟ ರೂ.20,000/-ಗಳ ಗರಿಷ್ಟ ರೂ.30,000/-ಗಳ ಸಹಾಯಧನ ಉಳಿಕೆ ಶೇ.85ರಷ್ಟು ರೂ.1,70,000/-ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.

2. **ಅರ್ಹತೆ:**

ಅ) ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿ ಸೇರಿದವರಾಗಿರಬೇಕು. (ವಿಶ್ವಕರ್ಮ ಸಮುದಾಯ ಹಾಗೂ ಮತಿಯ ಅಲ್ಪಸಂಖ್ಯಾತರ ಸಮುದಾಯಗಳನ್ನು ಹೊರತುಪಡಿಸಿ)

ಆ) ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.40,000/-ಗಳು ಪಟ್ಟಣ ಪ್ರದೇಶದವರಿಗೆ ರೂ.55,000/-ಗಳ ಒಳಗಿರಬೇಕು.

ಇ) ಅರ್ಜಿದಾರರ ವಯಸ್ಸು 18 ರಿಂದ 55 ವರ್ಷದೊಳಗಿರಬೇಕು.

ಈ) ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

ಉ) ಈ ಹಿಂದೆ ಈಗಾಗಲೇ ನಿಗಮದ ಯೋಜನೆಗಳಲ್ಲಿ ಸೌಲಭ್ಯ ಪಡೆದಿರಬಾರದು.

3. **ಸಾಲದ ಮರುಪಾವತಿ ಅವಧಿ:** 3 ವರ್ಷಗಳು(ಮಾಸಿಕ ಕಂತುಗಳಲ್ಲಿ).

4. **ಸಾಲದ ಉದ್ದೇಶಗಳು**: ಈ ಯೋಜನೆಯಲ್ಲಿ ಕೃಷಿ ಅವಲಂಭಿತ ಚಟುವಟಿಕೆಗಳು, ವ್ಯಾಪಾರ ಚಟುವಟಿಕೆಗಳು ಹಾಗೂ ಸೇವಾ ವಲಯ ಚಟುವಟಿಕೆಗಳಿಗೆ ಸಾಲ ಸೌಲಭ್ಯ ಒದಗಿಸುವುದು.

**ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ-........ .ರಲ್ಲಿ ಪುಟ ಸಂಖ್ಯೆ: ...... ರಿಂದ ........ ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ-....... .ರಲ್ಲಿ ಪುಟ ಸಂಖ್ಯೆ: ....... ರಲ್ಲಿ ಇರಿಸಿದೆ.**

III. **ಕಿರುಸಾಲ ಯೋಜನೆ:-** ಈ ಯೋಜನೆಯಲ್ಲಿ ಕುಶಲಿ ಅಥವಾ ಕುಶಲಿಯಲ್ಲದ ವ್ಯಕ್ತಿಗಳು ನಗರ, ಪಟ್ಟಣ ಮತ್ತು ಹೋಬಳಿ ಹಂತಗಳಲ್ಲಿ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವ ಸಹಾಯ ಗುಂಪುಗಳ ಮೂಲಕ ಸಾಲ ಸೌಲಭ್ಯ ನೀಡುವುದು.

1. **ಸಾಲದ ಉದ್ದೇಶ**: ಸಣ್ಣ ವ್ಯಾಪಾರ ಚುಟುವಟಿಕೆಗಳಾದ ಹಣ್ಣು, ತರಕಾರಿ ವ್ಯಾಪಾರ, ಹಾಲು ವ್ಯಾಪಾರ, ಹೂ ವ್ಯಾಪಾರ, ಮೀನುವ್ಯಾಪಾರ, ಟೀ/ಕಾಫಿ ಸ್ಟಾಲ್, ಸಣ್ಣ ವ್ಯಾಪಾರ ಇತ್ಯಾದಿ ವ್ಯಾಪಾರದ ಚಟುವಟಿಕೆಗಳಿಗೆ ಗರಿಷ್ಠ ರೂ.15,000/-ಗಳ ಆರ್ಥಿಕ ನೆರವು.
2. **ಅರ್ಹತೆ:** ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿ ಸೇರಿದವರಾಗಿರಬೇಕು (ವಿಶ್ವಕರ್ಮ ಸಮುದಾಯ ಹಾಗೂ ಮತಿಯ ಅಲ್ಪಸಂಖ್ಯಾತರ ಸಮುದಾಯಗಳನ್ನು ಹೊರತುಪಡಿಸಿ)
3. **ಸಹಾಯಧನ**: ಗರಿಷ್ಠ ರೂ.5,000/-ಗಳು.
4. **ಸಾಲದ ಮೊತ್ತ**: ರೂ.10,000/-ಗಳು.
5. **ಬಡ್ಡಿದರ:** ಸ್ವ ಸಹಾಯ ಸಂಘಗಳು ಸಾಲದ ಮೊತ್ತವನ್ನು ವಾರ್ಷಿಕ ಶೇಕಡ 4ರ ಬಡ್ಡಿಯೊಂದಿಗೆ ನಿಗಮಕ್ಕೆ ಹಿಂದಿರುಗಿಸಬೇಕಾಗಿರುತ್ತದೆ. ಶೇಕಡ 1ರ ಭಾಗ ಬಡ್ಡಿಯನ್ನು ಹೆಚ್ಚುವರಿಯಾಗಿ ಪಡೆದು ಸ್ವ-ಸಹಾಯ ಗುಂಪುಗಳು ಸೇವಾ ಶುಲ್ಕವಾಗಿ ಇಟ್ಟುಕೊಳ್ಳಬಹುದು.
6. ಫಲಾನುಭವಿಗಳು ಸ್ವಸಹಾಯ ಗುಂಪುಗಳ ಸದಸ್ಯರಾಗಿರಬೇಕು. ***ಫಲಾನುಭವಿಗಳು ಬಿ.ಪಿ.ಎಲ್. ಕುಟುಂಬಕ್ಕೆ ಸೇರಿದವರಾಗಿರಬೇಕು, ಸರ್ಕಾರಿ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿರಬಾರದು.***

7. **ಮರುಪಾವತಿ:** ಸ್ವಸಹಾಯ ಗುಂಪುಗಳು ಸಾಲದ ಮೊತ್ತವನ್ನು 36 ತಿಂಗಳಲ್ಲಿ, 12 ತ್ರೈಮಾಸಿಕ ಕಂತುಗಳಲ್ಲಿ ಸಾಲ ಮರುಪಾವತಿ ಮಾಡಬೇಕು.

**ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ-.......... ರಲ್ಲಿ ಪುಟ ಸಂಖ್ಯೆ: .......... ರಿಂದ .......... ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ-........ ರಲ್ಲಿ ಪುಟ ಸಂಖ್ಯೆ: ......... ರಲ್ಲಿ ಇರಿಸಿದೆ.**

## IV. ಅರಿವು-ಶೈಕ್ಷಣಿಕ ಸಾಲ ಯೋಜನೆ:

1. **ಸಾಲದ ಉದ್ದೇಶ:** ಹಿಂದುಳಿದ ವರ್ಗಗಳ ಸೇರಿದ ವಿದ್ಯಾರ್ಥಿಗಳಿಗೆ ಶೈಕ್ಷಣಿಕಾಭಿವೃದ್ಧಿಗಾಗಿ ಆರ್ಥಿಕ ನೆರವು.

2. **ಸಾಲದ ಮೊತ್ತ:** ವಾರ್ಷಿಕ ರೂ.1.00ಲಕ್ಷಗಳಂತೆ ಕೋರ್ಸ್ ಅವಧಿಗೆ ಗರಿಷ್ಠ ರೂ.4.00 ರಿಂದ ರೂ.5.00ಲಕ್ಷಗಳ ವರೆಗೆ ಸಾಲ.

3. **ಬಡ್ಡಿದರ:** ವಾರ್ಷಿಕ ಶೇ.2ರಷ್ಟು.

4. **ಅರ್ಹತೆ:**

   ಅ) ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿರಬೇಕು. (ವಿಶ್ವಕರ್ಮ ಸಮುದಾಯ ಹಾಗೂ ಮತಿಯ ಅಲ್ಪಸಂಖ್ಯಾತರ ಸಮುದಾಯಗಳನ್ನು ಹೊರತುಪಡಿಸಿ)

   ಆ) ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.3.50ಲಕ್ಷಗಳ ಮಿತಿಯಲ್ಲಿರಬೇಕು.

   ಇ) ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ(ಸಿ.ಇ.ಟಿ.) ಪ್ರವೇಶ ಪಡೆದಿರಬೇಕು.

5. **ವ್ಯಾಸಂಗದ ಕೋರ್ಸ್‌ಗಳು:** (1) ಬಿ.ಇ., (2) ಎಂ.ಬಿ.ಬಿ.ಎಸ್., (3) ಬಿ.ಯೂ.ಎಂ.ಎಸ್., (4) ಬಿ.ಡಿ.ಎಸ್. (5) ಬಿ.ಎ.ಎಂ.ಎಸ್. (6) ಬಿ.ಎಚ್.ಎಂ.ಎಸ್. (7) ಎಂ.ಬಿ.ಎ. (8) ಎಂ.ಟೆಕ್. (9) ಎಂ.ಇ., (10) ಎಂ.ಡಿ., (11) ಪಿಹೆಚ್.ಡಿ. (12) ಬಿ.ಸಿ.ಎ./ಎಂ.ಸಿ.ಎ (13) ಎಂ.ಎಸ್.ಆಗ್ರಿಕಲ್ಚರ್ (14)ಬಿ.ಎಸ್ಸಿ. ನರ್ಸಿಂಗ್, (15)ಬಿ.ಫಾರಂ/ಎಂ.ಫಾರಂ (16) ಬಿ.ಎಸ್ಸಿ. ಪ್ಯಾರಾ ಮೆಡಿಕಲ್ (17) ಬಿ.ಎಸ್ಸಿ. ಬಯೋ ಟೆಕ್ನಾಲಜಿ (18) ಬಿ.ಟೆಕ್ (19) ಬಿ.ಪಿ.ಟಿ. (20) ಬಿ.ವಿ.ಎಸ್.ಸಿ/ಎಂ.ವಿ.ಎಸ್.ಸಿ. (21)ಬಿ.ಎನ್.ಎಂ. (22)ಬಿ.ಹೆಚ್.ಎಮ್. (23)ಎಂ.ಡಿ.ಎಸ್. (24) ಎಂ.ಎಸ್.ಡಬ್ಲ್ಯೂ (25) ಎಲ್.ಎಲ್.ಎಂ. (26)ಎಂ.ಎಫ್.ಎ. (27) ಎಂ.ಎಸ್ಸಿ. ಬಯೋ ಟೆಕ್ನಾಲಜಿ ಮತ್ತು (28) ಎಂ.ಎಸ್ಸಿ. ಎಜಿ

6. **ಮರುಪಾವತಿ:** ಕೋರ್ಸ್ ಪೂರ್ಣಗೊಂಡ 4 ತಿಂಗಳ ನಂತರ 3 ವರ್ಷಗಳಲ್ಲಿ ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡುವುದು.

7. **ಅಭ್ಯರ್ಥಿಗಳ ಆಯ್ಕೆ:** ಈ ಕಾರ್ಯಕ್ರಮದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಪ್ರವೇಶ ಪಡೆದು ವ್ಯಾಸಂಗ ಮಾಡುವ ವಿದ್ಯಾರ್ಥಿಗಳನ್ನು ಹೊರತು ಪಡಿಸಿ, ಇತರೆ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಆಯ್ಕೆ ಸಮಿತಿ ಮೂಲಕ ಜಿಲ್ಲೆಗೆ ನಿಗದಿಪಡಿಸಿದ ಆರ್ಥಿಕ ಮತ್ತು ಭೌತಿಕ ಗುರಿಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು.

**ಗುರಿಯನ್ನು ಜಿಲ್ಲಾವಾರು ಗುರಿಯನ್ನು ಅನುಬಂಧ-........... ರಲ್ಲಿ ಪುಟ ಸಂಖ್ಯೆ: ..... ಇರಿಸಿದೆ.**

## V. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು:

1. **ಉದ್ದೇಶ:** ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪಿ.ಹೆಚ್.ಡಿ., ಪೋಸ್ಟ್ ಡಾಕ್ಟ್ರಲ್ ಮತ್ತು ಮಾಸ್ಟರ್ ಡಿಗ್ರಿ ವ್ಯಾಸಂಗಕ್ಕೆ ಪ್ರವೇಶ ಹೊಂದಿದ ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ, 3ಬಿ (ವಿಶ್ವಕರ್ಮ ಸಮುದಾಯಗಳ ಮತ್ತು ಮತೀಯ ಅಲ್ಪಸಂಖ್ಯಾತರನ್ನು ಹೊರತುಪಡಿಸಿ) ವಿದ್ಯಾರ್ಥಿಗಳಿಗೆ ಬಡ್ಡಿ ರಹಿತ ಸಾಲ.
2. **ಸಾಲದ ಮೊತ್ತ:** ವಾರ್ಷಿಕ ಗರಿಷ್ಠ ರೂ.3.50ಲಕ್ಷಗಳಂತೆ 3 ವರ್ಷದ ಅವಧಿಗೆ ಗರಿಷ್ಠ ರೂ.10.00ಲಕ್ಷಗಳು.
3. ಅಭ್ಯರ್ಥಿಯ ವಯಸ್ಸು 35 ವರ್ಷಗಳ ವಯೋಮಿತಿಯಲ್ಲಿರಬೇಕು.
4. ಕುಟುಂಬದ ವಾರ್ಷಿಕ ಆದಾಯ ರೂ.3,50,000/–ಗಳ ಮಿತಿಯಲ್ಲಿರಬೇಕು.
5. ವ್ಯಾಸಂಗಕ್ಕೆ ಪ್ರವೇಶ ಪಡೆದ ಬಗ್ಗೆ ವಿದೇಶಿ ವಿಶ್ವವಿದ್ಯಾಲಯಗಳ ಪ್ರವೇಶ ಪತ್ರ, ವೀಸಾ, ಪಾಸ್‌ಪೋರ್ಟ್, ಏರ್‌ಟಿಕೇಟ್‌ನ ಪ್ರತಿ ಒದಗಿಸಬೇಕು.
6. ಸಾಲದ ಭದ್ರತೆಗೆ ವಿದ್ಯಾರ್ಥಿಯ ತಂದೆ ಅಥವಾ ಜಾಮೀನುದಾರರು ಹೊಂದಿರುವ ಸ್ಥಿರಾಸ್ಥಿಯನ್ನು ನಿಗಮಕ್ಕೆ ಆಧಾರ ಮಾಡಬೇಕು. (ಕೊಲ್ಯಾಟರಲ್ ಸೆಕ್ಯೂರಿಟಿ)
7. **ಅಭ್ಯರ್ಥಿಗಳ ಆಯ್ಕೆ:** ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡುವುದು.
8. **ಮರುಪಾವತಿ ಅವಧಿ:** ಮರುಪಾವತಿ ಅವಧಿ ಗರಿಷ್ಠ 60 ಮಾಸಿಕ ಕಂತುಗಳು. ವ್ಯಾಸಂಗ ಪೂರ್ಣಗೊಂಡ 1 ವರ್ಷದ ನಂತರ ಅಥವಾ ಉದ್ಯೋಗ ದೊರೆತ 6 ತಿಂಗಳ ನಂತರ ಮರುಪಾವತಿ ಕಂತು ಪ್ರಾರಂಭವಾಗುತ್ತದೆ.

## VI. ಗಂಗಾಕಲ್ಯಾಣ ನೀರಾವರಿ ಯೋಜನೆ:

1. **ಉದ್ದೇಶ:** ಹಿಂದುಳಿದ ವರ್ಗಗಳ ಸಣ್ಣ ಮತ್ತು ಅತಿಸಣ್ಣ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸುವುದು.
2. **ಅರ್ಹತೆ:** ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿ ಸೇರಿದವರಾಗಿದ್ದು, ಸಣ್ಣ ಮತ್ತು ಅತಿ ಸಣ್ಣ ರೈತರಾಗಿರಬೇಕು. ಅವರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.40000/–ಗಳ ಒಳಗಿರಬೇಕು.
3. **ಸೌಲಭ್ಯ:**

   1. **ವೈಯುಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ:** ಈ ಯೋಜನೆಯಲ್ಲಿ ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು. ಉಳಿಕೆ ಜಿಲ್ಲೆಗಳಲ್ಲಿ ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಇರುವ ಕನಿಷ್ಠ 2 ಎಕರೆ ಜಮೀನು ಇರಬೇಕು.

      **ಘಟಕವೆಚ್ಚ:** ರೂ.2.50ಲಕ್ಷಗಳು. ರೂ.2.00ಲಕ್ಷಗಳ ಸಹಾಯಧನ(ಸಬ್ಸಿಡಿ) ಹಾಗೂ ರೂ.50,000/–ಗಳು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ.

      **ಮರುಪಾವತಿ ಅವಧಿ:** ಸಾಲದ ಮರುಪಾವತಿ ಅವಧಿ 3 ವರ್ಷಗಳು.

ಕೊರೆದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಆರ್.ಆರ್. ಸಂಖ್ಯೆ ನೀಡಿದ ನಂತರ ವಿದ್ಯುತ್ ಸರಬರಾಜು ಕಂಪನಿಗಳಿಗೆ ವಿದ್ಯುದ್ದೀಕರಣ ವೆಚ್ಚವಾಗಿ. ಪ್ರತಿ ಕೊಳವೆ ಬಾವಿಗಳಿಗೆ ಒಟ್ಟು ಘಟಕ ವೆಚ್ಚದಲ್ಲಿ ರೂ.50000/–ಗಳಂತೆ ಪಾವತಿಸಲಾಗುವುದು.

ಬೆಂಗಳೂರು ನಗರ, ಬೆಂಗಳೂರು ಗ್ರಾ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಜಿಲ್ಲೆಗಳಲ್ಲಿ ವೈಯಕ್ತಿಕ ಕೊಳವೆ ಬಾವಿಯ ಘಟಕ ವೆಚ್ಚ ರೂ.4.00ಲಕ್ಷಗಳು, ಇದರಲ್ಲಿ ರೂ.3.50ಲಕ್ಷಗಳ ಸಹಾಯಧನ ಹಾಗೂ ರೂ.50000/–ಗಳ ಸಾಲವಾಗಿರುತ್ತದೆ.

2. **ಸಾಮೂಹಿಕ ನೀರಾವರಿ ಕೊಳವೆಬಾವಿ ಯೋಜನೆ:** ಪ್ರವರ್ಗ–1, 2ಎ, 3ಎ & 3ಬಿಗೆ ಸೇರಿದ ಕನಿಷ್ಠ 3 ಜನ ಸಣ್ಣ ಮತ್ತು ಅತಿಸಣ್ಣ ರೈತರು ಹೊಂದಿರುವ 8 ಎಕರೆ ಮತ್ತು ಅದಕ್ಕಿಂತ ಹೆಚ್ಚಿನ ಜಮೀನಿಗೆ ಸಾಮೂಹಿಕವಾಗಿ ನೀರಾವರಿ ಸೌಲಭ್ಯ.

   **ಘಟಕ ವೆಚ್ಚ:** 8–15 ಎಕರೆ ಜಮೀನಿಗೆ ರೂ.4.00ಲಕ್ಷಗಳ ವೆಚ್ಚದಲ್ಲಿ 2 ಕೊಳವೆಬಾವಿ ಹಾಗೂ 15 ಎಕರೆಗಿಂತ ಹೆಚ್ಚು ಜಮೀನು ಒಳಪಡುವ ಘಟಕಗಳಿಗೆ ನಿಗದಿತ ಘಟಕವೆಚ್ಚ ರೂ.6.00ಲಕ್ಷಗಳ ವೆಚ್ಚದಲ್ಲಿ 3 ಕೊಳವೆಬಾವಿಗಳನ್ನು ಕೊರೆಯಿಸಿ ಪಂಪ್‌ಸೆಟ್ ಮತ್ತು ಉಪಕರಣಗಳನ್ನು ಸರಬರಾಜು ಮಾಡುವುದು ಹಾಗೂ ವಿದ್ಯುದ್ದೀಕರಣಕ್ಕೆ ಠೇವಣಿ ಪಾವತಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿ ನೀರಾವರಿ ಸೌಲಭ್ಯ ಒದಗಿಸುವುದು. ಇದು ಪೂರ್ಣ ಅನುದಾನವಾಗಿರುತ್ತದೆ.

3. **ತೆರೆದಬಾವಿ:** ವೈಯುಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಗೆ ನಿಗದಿಪಡಿಸಿದ ಘಟಕ ವೆಚ್ಚದಲ್ಲಿ ಕರಾವಳಿ ಹಾಗೂ ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲಿ ತೆರೆದಬಾವಿ ನೀರಾವರಿ ಸೌಲಭ್ಯ ಒದಗಿಸಲು ಅವಕಾಶವಿರುತ್ತದೆ.

4. **ಸಾಮೂಹಿಕ ಏತ ನೀರಾವರಿ ಯೋಜನೆ:** ಭೂಮಟ್ಟದಲ್ಲಿ ಶಾಶ್ವತವಾಗಿ ದೊರೆಯುವ ಜಲಸಂಪನ್ಮೂಲಗಳಾದ ನದಿ, ಕೆರೆ, ಹಳ್ಳ ಇವುಗಳಿಗೆ ಮೋಟಾರ್ ಅಳವಡಿಸಿ ಪೈಪ್‌ಲೈನ್ ಮೂಲಕ ಖುಷ್ಕಿ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸುವುದು.

   **ಘಟಕವೆಚ್ಚ:** ಸಾಮೂಹಿಕ ನೀರಾವರಿ ಯೋಜನೆಗೆ ನಿಗದಿಪಡಿಸಿದ ಘಟಕ ವೆಚ್ಚದಲ್ಲಿ ಸೌಲಭ್ಯ ಒದಗಿಸುವುದು.

   ಈ ಕಾರ್ಯಕ್ರಮಕ್ಕೆ ಆಯಾ ವಿಧಾನಸಭಾ ಕ್ಷೇತ್ರಕ್ಕೆ ನಿಗದಿಪಡಿಸಿದ ಆರ್ಥಿಕ ಗುರಿಯನ್ನಯ ಮೀಸಲಾತಿ ಅನುಪಾತ ಪ್ರವರ್ಗ–1 ಮತ್ತು 2ಎಗೆ 70% ಪ್ರವರ್ಗ–3ಎ ಮತ್ತು 3ಬಿಗೆ 30%ರಂತೆ ವೈಯಕ್ತಿಕ/ಸಾಮೂಹಿಕ ನೀರಾವರಿ ಘಟಕಗಳನ್ನು ಆಯ್ಕೆ ಮಾಡಿ ಸೌಲಭ್ಯ ಒದಗಿಸಬೇಕು.

5. ಕರ್ನಾಟಕ ಅಂತರ್ಜಲ ಅಧಿನಿಯಮದನ್ವಯ ಈ ಕೆಳಕಂಡ 35 ತಾಲ್ಲೂಕುಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಕೊಳವೆ ಬಾವಿ ಕೊರೆಯುವ ಮುನ್ನ ಅಂತರ್ಜಲ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು. ಅನುಮತಿ ಪಡೆದಂತಹ ಫಲಾನುಭವಿಗಳ ಜಮೀನುಗಳಲ್ಲಿ ಕೊಳವೆ ಬಾವಿ ಕೊರೆಯಲು ಕ್ರಮವಹಿಸತಕ್ಕದ್ದು.

| ಕ್ರ. ಸಂ. | ಜಿಲ್ಲೆಯ ಹೆಸರು. | ಕ್ರ. ಸಂ. | ತಾಲ್ಲೂಕುಗಳ ಹೆಸರು |
|---|---|---|---|
| 1 | ಬೆಂಗಳೂರು ನ. | 1 | ಆನೇಕಲ್ |
| | | 2 | ಬೆಂಗಳೂರು ಪೂರ್ವ |
| | | 3 | ಬೆಂಗಳೂರು ಉತ್ತರ |
| | | 4 | ಬೆಂಗಳೂರು ದಕ್ಷಿಣ |

| | | | |
|---|---|---|---|
| 2 | ಬೆಂಗಳೂರು ಗ್ರಾ. | 5 | ದೇವನಹಳ್ಳಿ |
| | | 6 | ದೊಡ್ಡಬಳ್ಳಾಪುರ |
| | | 7 | ಹೊಸಕೋಟೆ |
| | | 8 | ನೆಲಮಂಗಲ |
| 3 | ರಾಮನಗರ | 9 | ಕನಕಪುರ |
| | | 10 | ರಾಮನಗರ |
| 4 | ತುಮಕೂರು | 11 | ಚಿಕ್ಕನಾಯ್ಕನಹಳ್ಳಿ |
| | | 12 | ಕೊರಟಗೆರೆ |
| | | 13 | ಮಧುಗಿರಿ |
| 5 | ಚಿತ್ರದುರ್ಗ | 14 | ಚಿತ್ರದುರ್ಗ |
| | | 15 | ಹೊಳಲ್ಕೆರೆ |
| 6 | ಕೋಲಾರ | 16 | ಬಂಗಾರಪೇಟೆ |
| | | 17 | ಕೋಲಾರ |
| | | 18 | ಮಾಲೂರು |
| | | 19 | ಮುಳಬಾಗಿಲು |
| | | 20 | ಶ್ರೀನಿವಾಸಪುರ |
| 7 | ಚಿಕ್ಕಬಳ್ಳಾಪುರ | 21 | ಚಿಕ್ಕಬಳ್ಳಾಪುರ |
| | | 22 | ಚಿಂತಾಮಣಿ |
| | | 23 | ಗೌರಿಬಿದನೂರು |
| | | 24 | ಗುಡಿಬಂಡೆ |
| | | 25 | ಶಿಡ್ಲಘಟ್ಟ |
| 8 | ದಾವಣಗೆರೆ | 26 | ಜಗಳೂರು |
| 9 | ಬೆಳಗಾವಿ | 27 | ಅಥಣಿ |
| | | 28 | ಬೈಲಹೊಂಗಲ |
| | | 29 | ರಾಮದುರ್ಗ |
| | | 30 | ಸವದತ್ತಿ |
| 10 | ಬಾಗಲಕೋಟೆ | 31 | ಬಾದಾಮಿ |
| | | 32 | ಬಾಗಲಕೋಟೆ |
| 11 | ಬಳ್ಳಾರಿ | 33 | ಹಗರಿ ಬೊಮ್ಮನಹಳ್ಳಿ |
| | | 34 | ಹಡಗಲಿ |
| 12 | ಕೊಪ್ಪಳ | 35 | ಯಲಬುರ್ಗ |

**ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ–.......... ರಲ್ಲಿ ಪುಟ ಸಂಖ್ಯೆ: .......... ರಿಂದ .............. ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ–........... ರಲ್ಲಿ ಪುಟ ಸಂಖ್ಯೆ: ............ ರಲ್ಲಿ ಇರಿಸಿದೆ.**

**ವಿಶೇಷ ಸೂಚನೆ: ಈ ಮೇಲ್ಕಂಡಂತೆ ಯೋಜನೆಗಳ ಮಾಹಿತಿಯು ಸಂಕ್ಷಿಪ್ತ ರೂಪದಲ್ಲಿದ್ದಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಸಂಬಂಧಿಸಿದ ಸರ್ಕಾರದ ಆದೇಶಗಳು ಹಾಗೂ ಮಾರ್ಗಸೂಚಿಗಳನ್ನು ಗಮನಿಸುವುದು.**

## VII. ಸಾಂಪ್ರದಾಯಿಕ ಕುಶಲಕರ್ಮಿಗಳು ಮತ್ತು ವೃತ್ತಿ ಕಸುಬುದಾರರಿಗೆ ಸಾಲ ಮತ್ತು ಸಹಾಯಧನ:–

ಸಾಂಪ್ರದಾಯಿಕ ವೃತ್ತಿ ಮತ್ತು ಕುಶಲಕರ್ಮಿಗಳಿಗೆ ಅವರ ವೃತ್ತಿ ಕೌಶಲ್ಯತೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ವೃತ್ತಿಯನುಸಾರ ಈ ಕೆಳಕಂಡಂತೆ ಸಾಲ ಸೌಲಭ್ಯ ಒದಗಿಸಲಾಗುವುದು.

1. ಘಟಕ ವೆಚ್ಚ ರೂ.50,000/–ಗಳಿಗೆ ಶೇ.30 ರಷ್ಟು ಗರಿಷ್ಠ ರೂ.10,000/–ಗಳ ಸಹಾಯಧನ ಉಳಿಕೆ ಶೇ.70 ರಷ್ಟು ರೂ.40,000/–ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.
2. ಘಟಕ ವೆಚ್ಚ ರೂ.50.001/–ರಿಂದ ರೂ.1,00,000/–ಗಳವರೆಗೆ ಶೇ.20 ರಷ್ಟು ಗರಿಷ್ಠ ರೂ.20,000/–ಗಳ ಸಹಾಯಧನ ಉಳಿಕೆ ಶೇ.80 ರಷ್ಟು ರೂ.80,000/–ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.
3. ಘಟಕ ವೆಚ್ಚ ರೂ.1,00,001/–ರಿಂದ ರೂ.2,00,000/–ಗಳವರೆಗೆ ಶೇ.15ರಷ್ಟು ರೂ.20,000/–ಗಳು ಗರಿಷ್ಠ ರೂ.30,000/–ಗಳ ಸಹಾಯಧನ ಉಳಿಕೆ ಶೇ.85 ರಷ್ಟು ರೂ.1,70,000/–ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.

**ಅರ್ಹತೆ:**

1. ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿ ಸೇರಿದವರಾಗಿರಬೇಕು (ವಿಶ್ವಕರ್ಮ ಸಮುದಾಯಗಳ ಮತ್ತು ಮತೀಯ ಅಲ್ಪಸಂಖ್ಯಾತರನ್ನು ಹೊರತುಪಡಿಸಿ) ಹಾಗೂ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.40000/–ಗಳು ಪಟ್ಟಣ ಪ್ರದೇಶದವರಿಗೆ ರೂ.55,000/–ಗಳ ಒಳಗಿರಬೇಕು.
2. ಈ ಕೆಳಕಂಡ 47 ಸಾಂಪ್ರದಾಯಿಕ ವೃತ್ತಿ/ಕುಶಲ ಕರ್ಮಿ ವೃತ್ತಿಯನ್ನು ಕೈಗೊಳ್ಳುತ್ತಿರಬೇಕು.

| | | | | | |
|---|---|---|---|---|---|
| 1 | ಬಡಗಿ ಕೆಲಸ/ಮರದ ಕೆತ್ತನೆ ಕೆಲಸ, | 18 | ಟೈಲರಿಂಗ್ | 35 | ಜೇನು ಸಾಕಾಣಿಕೆ |
| 2 | ಉಣ್ಣೆ ಮತ್ತು ಕಂಬಳಿ ನೇಯ್ಗೆ, | 19 | ಹತ್ತಿ ನೇಯ್ಗೆ/ನೇಕಾರಿಕೆ | 36 | ನಿಟ್ಟಿಂಗ್ ಕೆಲಸ |
| 3 | ಅಡಿಕೆ ಹಾಳೆಯಿಂದ ತಟ್ಟೆ ತಯಾರಿಕೆ | 20 | ಚರ್ಮದ ವಸ್ತುಗಳ ತಯಾರಿಕೆ | 37 | ಗಾಣದ ಕೆಲಸ |
| 4 | ಉಣ್ಣೆ ನೇಯ್ಗೆ ಮತ್ತು ಹಾಸು ಕಂಬಳಿ ತಯಾರಿಕೆ | 21 | ಅಗರಭತ್ತಿ ತಯಾರಿಕೆ | 38 | ಮೆಷನರಿ ವರ್ಕ್ಸ್ |
| 5 | ಸಿಲ್ಕ್ ರೀಲಿಂಗ್ ಮತ್ತು ಸಿಲ್ಕ್ ಟ್ವಿಸ್ಟಿಂಗ್ ಕೆಲಸ | 22 | ಕಾಯರ್ ಫೈಬರ್ ತಯಾರಿಕೆ | 39 | ಹೂ ಕಟ್ಟುವ ವೃತ್ತಿ |
| 6 | ಪೊರಕೆ ಕಡ್ಡಿ ತಯಾರಿಕೆ | 23 | ವಿಗ್ರಹ/ಕಲ್ಲು ಕತ್ತನೆ ಕೆಲಸಗಳು | 40 | ಹೊಸೈರಿ ವಸ್ತುಗಳ ತಯಾರಿಕೆ |
| 7 | ಬಿದರಿ ವೇರ್ ಕೆಲಸ | 24 | ಲಾಂಡ್ರಿ/ದೋಬಿ ಕೆಲಸ | 41 | ಪಾತ್ರೆಗಳಿಗೆ ಕಲಾಯಿ |
| 8 | ಸುಣ್ಣ ಸುಡುವುದು | 25 | ಮೀನುಗಾರಿಕೆ | 42 | ವಾದ್ಯ ವೃಂದ ವೃತ್ತಿ |
| 9 | ಕ್ಷೌರಿಕ ವೃತ್ತಿ/ಸೆಲೂನ್, | 26 | ನಾಟಿ ಔಷಧಿ | 43 | ಹೈನುಗಾರಿಕೆ(ಗೌಳಿ ವೃತ್ತಿ) |
| 10 | ವಾಲಗ ಊದುವುದು | 27 | ಬಣ್ಣ/ಶೃಂಗಾರ(ಬ್ಯೂಟಿ ಪಾರ್ಲರ್) ಮಾಡುವ ವೃತ್ತಿ | 44 | ಬೈಸಿಕಲ್/ಆಟೋ ಮೊಬೈಲ್ ರಿಪೇರಿ |
| 11 | ದನಗಾಹಿ ವೃತ್ತಿ, | 28 | ಶೀಟ್ ಮೆಟಲ್ ವೃತ್ತಿ | 45 | ವೆಲ್ಡಿಂಗ್ ವರ್ಕ್ಸ್ |
| 12 | ಬಳೆ ವ್ಯಾಪಾರ/ಮೇಣದ ಬತ್ತಿ | 29 | ಬಣ್ಣಗಾರಿಕೆ ಮತ್ತು ಮುದ್ರಣಗಾರಿಕೆ | 46 | ಕುರಿ ಸಾಕಾಣಿಕೆ |
| 13 | ಚಿನ್ನಬೆಳ್ಳಿ ಕೆಲಸ | 30 | ಮ್ಯಾಟ್ ತಯಾರಿಕೆ | 47 | ಕುಂಬಾರಿಕೆ/ಕಲಾತ್ಮಕ ಉತ್ಪನ್ನಗಳ ತಯಾರಿಕೆ |
| 14 | ಕಂಚು ಕೆಲಸ | 31 | ಗಾಡಿ/ರಥ ತಯಾರಿಕೆ | | |
| 15 | ನಾರಿನಿಂದ ವಿವಿಧ ಉತ್ಪನ್ನ | 32 | ಗ್ಲಾಸ್ ಬೀಡ್ಸ್ ತಯಾರಿಕೆ | | |

| | | | | | |
|---|---|---|---|---|---|
| | ತಯಾರಿಕೆ | | | | |
| 16 | ಕಮ್ಮಾರಿಕೆ/ಕುಲುಮೆ | 33 | ಮೆಟಲ್ ಕ್ರಾಫ್ಟ್ ಕೆಲಸ | | |
| 17 | ಬೆತ್ತದ ಕೆಲಸ(ರಟ್ಟನ್) ಆಟಿಕೆ/ ಗೊಂಬೆ ತಯಾರಿಕೆ ಮತ್ತು ಕೆತ್ತನೆ ಕೆಲಸ | 34 | ಟಿನ್ ವಸ್ತುಗಳ ತಯಾರಿಕೆ | | |

**ವಿಶೇಷ ಸೂಚನೆ: ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ಸ್ಥಾಪನೆಯಾಗಿರುವುದರಿಂದ ಈ ಮೇಲ್ಕಂಡ ವೃತ್ತಿಗಳಲ್ಲಿ ವಿಶ್ವಕರ್ಮ ಸಮುದಾಯದವರು ಕೈಗೊಳ್ಳುವ ವೃತ್ತಿಗಳಿಗೆ, ಈ ಯೋಜನೆಯಲ್ಲಿ ಸೌಲಭ್ಯ ಒದಗಿಸಲು ಅವಕಾಶವಿರುವುದಿಲ್ಲ.**

**ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ–.......... ರಲ್ಲಿ ಪುಟ ಸಂಖ್ಯೆ: .......... ರಿಂದ ............ ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ–.......... ರಲ್ಲಿ ಪುಟ ಸಂಖ್ಯೆ: .............ಇರಿಸಿದೆ.**

**VIII.** ಸನ್ಮಾನ್ಯ ಮುಖ್ಯಮಂತ್ರಿಯವರು 2017–18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಡಿವಾಳ, ಸವಿತಾ ಸಮಾಜ, ಕುಂಬಾರ ಮತ್ತು ತಿಗಳ ಸಮಾಜದ ಅಭಿವೃದ್ಧಿಗಳಿಗೆ ರೂ.60.00ಕೋಟಿಗಳನ್ನು ಒದಗಿಸುವುದಾಗಿ ಘೋಷಿಸಲಾಗಿರುತ್ತದೆ. ಆದ್ದರಿಂದ ಈ ಸಮುದಾಯಗಳ ಅಭಿವೃದ್ಧಿಗೆ ಸಮುದಾಯವಾರು ಪ್ರತ್ಯೇಕವಾಗಿ ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ ಅನುಷ್ಠಾನಗೊಳಿಸಲಾಗುವುದು.

1. **ಮಡಿವಾಳ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮಗಳು:**

**(ಲಕ್ಷ ರೂ.ಗಳಲ್ಲಿ)**

| ಕ್ರ. ಸಂ. | ಉದ್ದೇಶಗಳು | | ಭೌತಿಕ | ಆರ್ಥಿಕ |
|---|---|---|---|---|
| 1 | ದೋಬಿ ವೃತ್ತಿಗೆ ಆರ್ಥಿಕ ನೆರವು | – | **250** | **200.00** |
| 2 | ಸ್ವಯಂ ಉದ್ಯೋಗ ಸಾಲ (ಮಹಿಳಾ ಸ್ವ ಸಹಾಯ ಗುಂಪುಗಳ ಮೂಲಕ) | – | **4500** | **900.00** |
| 3 | ಗಂಗಾ ಕಲ್ಯಾಣ ನೀರಾವರಿ ಯೋಜನೆ | – | **140** | **300.00** |
| 4 | ಶೈಕ್ಷಣಿಕ ಸಾಲ ಯೋಜನೆ | – | **100** | **75.00** |
| 5 | ಕೌಶಲ್ಯಾಭಿವೃದ್ಧಿ ತರಬೇತಿ | – | **156** | **25.00** |
| | **ಒಟ್ಟು** | – | **5146** | **1500.00** |

1. **ಮಡಿವಾಳ ಸಮುದಾಯದ ಸಾಂಪ್ರದಾಯಿಕ ವೃತ್ತಿಯಾದ ದೋಬಿ ವೃತ್ತಿ ನಿರ್ವಹಿಸಲು ಆರ್ಥಿಕ ನೆರವು.**
    1. **ಮಡಿವಾಳ ಸಮುದಾಯಕ್ಕೆ ಸೇರಿದ ಉಪ ಜಾತಿಗಳು:** ಅಗಸ, ಚಕಲ, ಧೋಬಿ, ಮಡಿವಾಳ, ಮನ್ನನ್, ಪರಿತ್, ರಾಜಕ, ಸಕಲ, ವನ್ನನ್, ವೆಲುತೇಡನ್ ಮತ್ತು ಸಾಕಲವಾಡು.
    2. **ಘಟಕ ವೆಚ್ಚ:** ರೂ.50,000/–ಗಳಿಗೆ ಶೇ.30 ರಷ್ಟು ಗರಿಷ್ಠ ರೂ.10,000/–ಗಳ ಸಹಾಯಧನ ಉಳಿಕೆ ಶೇ.70 ರಷ್ಟು ರೂ.40,000/–ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.

3. ಘಟಕ ವೆಚ್ಚ ರೂ.50,001/-ರಿಂದ ರೂ.1,00,000/-ಗಳವರೆಗೆ ಶೇ.20 ರಷ್ಟು ಗರಿಷ್ಠ ರೂ.20,000/-ಗಳ ಸಹಾಯಧನ ಉಳಿಕೆ ಶೇ.80 ರಷ್ಟು ರೂ.80,000/-ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.
4. ಘಟಕ ವೆಚ್ಚ ರೂ.1,00,001/-ರಿಂದ ರೂ.2,00,000/-ಗಳವರೆಗೆ ಶೇ.15 ರಷ್ಟು ಕನಿಷ್ಟ ರೂ.20,000/-ಗಳ ಗರಿಷ್ಠ ರೂ.30,000/-ಗಳ ಸಹಾಯಧನ ಉಳಿಕೆ ಶೇ.85 ರಷ್ಟು ರೂ.1,70,000/-ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.

2. **ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲ ಮತ್ತು ಸಹಾಯಧನದ ಸೌಲಭ್ಯ (ಮಹಿಳಾ ಸ್ವ ಸಹಾಯ ಗುಂಪುಗಳ ಮೂಲಕ)** ಮಹಿಳಾ ಸ್ವ ಗುಂಪುಗಳ ಮೂಲಕ ಸ್ವಯಂ ಉದ್ಯೋಗ ಕೈಗೊಳ್ಳಲು ಗುಂಪಿನ ಪ್ರತಿ ಸದಸ್ಯರಿಗೆ ರೂ.15,000/-ಗಳ ಸಾಲ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಹಾಗೂ ರೂ.5,000/-ಗಳ ಸಹಾಯಧನ. 15 ಸದಸ್ಯರ ಪ್ರತಿ ಗುಂಪಿಗೆ ಗರಿಷ್ಠ ರೂ.75000/-ಗಳ ಸಹಾಯಧನ ಹಾಗೂ ರೂ.2.25ಲಕ್ಷಗಳ ಸಾಲ ಹೀಗೆ ಒಟ್ಟು ರೂ.3.00ಲಕ್ಷಗಳ ಸೌಲಭ್ಯ.

3. **ಗಂಗಾ ಕಲ್ಯಾಣ ನೀರಾವರಿ ಯೋಜನೆ:** ಮಡಿವಾಳ ಸಮುದಾಯದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗಂಗಾ ಕಲ್ಯಾಣ ನೀರಾವರಿ ಯೋಜನೆಯ ಘಟಕ ವೆಚ್ಚದಲ್ಲಿ ನೀರಾವರಿ ಸೌಲಭ್ಯ ಒದಗಿಸಲಾಗುವುದು.
4. **ಶೈಕ್ಷಣಿಕ ಸಾಲ:** ಮಡಿವಾಳ ಸಮುದಾಯದ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಲು ಅರಿವು ಶೈಕ್ಷಣಿಕ ಸಾಲ ಯೋಜನೆಯಲ್ಲಿ ಗರಿಷ್ಠ ರೂ.1.00.000/- ಗಳವರೆಗೂ ವಾರ್ಷಿಕ ಶೇ.2ರ ಬಡ್ಡಿ ದರದಲ್ಲಿ ಆರ್ಥಿಕ ನೆರವು.
5. **ಕೌಶಲ್ಯಾಭಿವೃದ್ಧಿ ತರಬೇತಿ:** ಡಿ.ಟಿ.ಪಿ. ತರಬೇತಿ, ವಾಹನ ಚಾಲನ ತರಬೇತಿ, ಬ್ಯೂಟಿಷಿಯನ್, ಟೈಲರಿಂಗ್, ರೆಡಿಮೇಡ್ ಗಾರ್ಮೆಂಟ್ಸ್ ತರಬೇತಿ ಇತ್ಯಾದಿ.

## IX. ಸವಿತ ಸಮಾಜದ ಅಭಿವೃದ್ಧಿ ಕಾರ್ಯಕ್ರಮಗಳು:

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ಉದ್ದೇಶಗಳು | | ಭೌತಿಕ | ಆರ್ಥಿಕ |
|---|---|---|---|---|
| 1 | ಕ್ಷೌರಿಕ ವೃತ್ತಿ ನಿರ್ವಹಿಸಲು ಆರ್ಥಿಕ ನೆರವು | – | 966 | 725.00 |
| 2 | ನಾಧಸ್ವರ ಮತ್ತು ಡೋಲು ಉಪಕರಣ ಕೊಂಡುಕೊಳ್ಳಲು ವೈಯಕ್ತಿಕ ಸಾಲ ಯೋಜನೆ | – | 1142 | 200.00 |
| 3 | ಸ್ವಯಂ ಉದ್ಯೋಗ ಸಾಲ | | 500 | 300.00 |
| 4 | ಗಂಗಾ ಕಲ್ಯಾಣ ನೀರಾವರಿ ಯೋಜನೆ | – | 45 | 100.00 |
| 5 | ಶೈಕ್ಷಣಿಕ ಸಾಲ ಯೋಜನೆ | – | 100 | 75.00 |
| 6 | 1. ಬೇಸಿಕ್ ಸೌಂದರ್ಯ ವರ್ಧಕ ತರಬೇತಿ<br>2. ಕೌಶಲ್ಯಾಭಿವೃದ್ಧಿ ತರಬೇತಿ. | –<br>– | 1500<br>165 | 75.00<br>25.00 |
| | ಒಟ್ಟು | – | 4418 | 1500.00 |

1. **ಸವಿತ ಸಮಾಜಕ್ಕೆ ಸೇರಿದ ಉಪ ಜಾತಿಗಳು**: ನಾಯಿಂದ, ಪರಿಯಾಳ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ) ಅಂಬಟ್ಟನ್, ಬಜಂತ್ರಿ, ಬಂಡಾರಿ, ಹಡಪದ, ಕವುಟಿಯನ್, ಕೆಲಸಿ, ಕ್ಷೌರಿಕ, ಕ್ಷೌರದ್, ಮಹಾಲೆ, ಮಂಗಳ, ಮೇಲಗಾರ, ನಾಡಿಗ, ನಾಪಿತ, ನವಲಿಗ್, ನಾವಿ, ನಯನಜ ಕ್ಷತ್ರಿಯ, ನ್ಹಾವಿ, ವಾಜಾಂತ್ರಿ, ಸವಿತ, ನಾಡಿಗ ಮತ್ತು ಕ್ಷೌರಿಕ.

**ಅ) ಸವಿತಾ ಸಮಾಜದವರ ಸಾಂಪ್ರದಾಯಿಕ ವೃತ್ತಿಯಾದ ಕ್ಷೌರಿಕ ವೃತ್ತಿ ನಿರ್ವಹಿಸಲು ಆರ್ಥಿಕ ನೆರವು.**

1. ಘಟಕ ವೆಚ್ಚ ರೂ.50,000/–ಗಳಿಗೆ ಶೇ.30ರಷ್ಟು ಗರಿಷ್ಟ ರೂ.10,000/–ಗಳ ಸಹಾಯಧನ ಉಳಿಕೆ ಶೇ.70ರಷ್ಟು ರೂ.40,000/–ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.
2. ಘಟಕ ವೆಚ್ಚ ರೂ.50,001/–ರಿಂದ ರೂ.1,00,000/–ಗಳವರೆಗೆ ಶೇ.20ರಷ್ಟು ಗರಿಷ್ಠ ರೂ.20,000/–ಗಳ ಸಹಾಯಧನ ಉಳಿಕೆ ಶೇ.80ರಷ್ಟು ರೂ.80,000/–ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.
3. ಘಟಕ ವೆಚ್ಚ ರೂ.1,00,001/–ರಿಂದ ರೂ.2,00,000/–ಗಳವರೆಗೆ ಶೇ.15ರಷ್ಟು ಕನಿಷ್ಠ ರೂ.20,000/–ಗಳ ಗರಿಷ್ಠ ರೂ.30,000/–ಗಳ ಸಹಾಯಧನ ಉಳಿಕೆ ಶೇ.85ರಷ್ಟು ರೂ.1,70,000/–ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.

**ಆ) ನಾದಸ್ವರ ಮತ್ತು ಡೋಲು/ಬ್ಯಾಂಡ್ ಸೆಟ್ ಉಪಕರಣಗಳನ್ನು ಕೊಳ್ಳಲು ಆರ್ಥಿಕ ನೆರವು.** ಸದರಿ ಕಾರ್ಯಕ್ರಮದಲ್ಲಿ ತಲಾ ರೂ.10000/–ಗಳಿಂದ ರೂ.25000/–ಗಳ ವರೆಗೆ ಸೌಲಭ್ಯ ಒದಗಿಸಲಾಗುವುದು. ಇದರಲ್ಲಿ ಶೇ.30ರಷ್ಟು ಸಹಾಯಧನ ಹಾಗೂ ಉಳಿಕೆ ಮೊತ್ತ ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ಸಾಲವಾಗಿರುತ್ತದೆ.

**ಇ) ಸ್ವಯಂ ಉದ್ಯೋಗ ಕೈಗೊಳ್ಳಲು ಸಾಂಪ್ರದಾಯಿಕ ವೃತ್ತಿಯಲ್ಲದ ಚಟುವಟಿಕೆಗಳಿಗೆ ಸಾಲ ಮತ್ತು ಸಹಾಯಧನದ ಸೌಲಭ್ಯ:**

**ಆರ್ಥಿಕ ಚಟುವಟಿಕೆ ಅನುಸಾರ**

1. ಘಟಕ ವೆಚ್ಚ ರೂ.50,000/–ಗಳಿಗೆ ಶೇ.30 ರಷ್ಟು ಗರಿಷ್ಟ ರೂ.10,000/–ಗಳ ಸಹಾಯಧನ ಉಳಿಕೆ ಶೇ.70 ರಷ್ಟು ರೂ.40,000/–ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.
2. ಘಟಕ ವೆಚ್ಚ ರೂ.50,001/–ರಿಂದ ರೂ.1,00,000/–ಗಳವರೆಗೆ ಶೇ.20 ರಷ್ಟು ಗರಿಷ್ಠ ರೂ.20,000/–ಗಳ ಸಹಾಯಧನ ಉಳಿಕೆ ಶೇ.80 ರಷ್ಟು ರೂ.80,000/–ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.
3. ಘಟಕ ವೆಚ್ಚ ರೂ.1,00,001/–ರಿಂದ ರೂ.2,00,000/–ಗಳವರೆಗೆ ಶೇ.15ರಷ್ಟು ಕನಿಷ್ಟ ರೂ.20,000/–ಗಳ ಗರಿಷ್ಠ ರೂ.30,000/–ಗಳ ಸಹಾಯಧನ ಉಳಿಕೆ ಶೇ.85ರಷ್ಟು ರೂ.1,70,000/–ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.

3. **ಗಂಗಾ ಕಲ್ಯಾಣ ನೀರಾವರಿ ಯೋಜನೆ:** ತಿಗಳ ಸಮುದಾಯದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗಂಗಾ ಕಲ್ಯಾಣ ನೀರಾವರಿ ಯೋಜನೆಯ ಘಟಕ ವೆಚ್ಚದಲ್ಲಿ ನೀರಾವರಿ ಸೌಲಭ್ಯ ಒದಗಿಸಲಾಗುವುದು.

4. **ಶೈಕ್ಷಣಿಕ ಸಾಲ:** ಮಡಿವಾಳ ಸಮುದಾಯದ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಲು ಅರಿವು ಶೈಕ್ಷಣಿಕ ಸಾಲ ಯೋಜನೆಯಲ್ಲಿ ವಾರ್ಷಿಕ ಗರಿಷ್ಠ ರೂ.1,00,000/-ಗಳ ವರೆಗೆ ಶೇ.2ರ ಬಡ್ಡಿ ದರದಲ್ಲಿ ಆರ್ಥಿಕ ನೆರವು.

5. **ಕೌಶಲ್ಯಾಭಿವೃದ್ಧಿ ತರಬೇತಿ:** ಡಿ.ಟಿ.ಪಿ. ತರಬೇತಿ, ವಾಹನ ಚಾಲನ ತರಬೇತಿ, ಬ್ಯೂಟಿಷಿಯನ್, ರೆಡಿಮೇಡ್ ಗಾರ್ಮೆಂಟ್ಸ್ ತರಬೇತಿ ಇತ್ಯಾದಿ.

## X. ತಿಗಳ ಸಮಾಜದ ಅಭಿವೃದ್ಧಿ ಕಾರ್ಯಕ್ರಮಗಳು:

| ಕ್ರ. ಸಂ. | ಉದ್ದೇಶಗಳು | | ಭೌತಿಕ | ಆರ್ಥಿಕ |
|---|---|---|---|---|
| **1** | ತರಕಾರಿ ಮತ್ತು ಹೂವು ಬೆಳೆಯುಲು/ ಮಾರಾಟ ಮಾಡಲು ಆರ್ಥಿಕ ನೆರವು | – | 1450 | 725.00 |
| **2** | ಸ್ವಯಂ ಉದ್ಯೋಗ ಸಾಲ ಯೋಜನೆ | – | 734 | 550.00 |
| **3** | ಗಂಗಾ ಕಲ್ಯಾಣ ಯೋಜನೆ | | 37 | 100.00 |
| **4** | ಅರಿವು ಶೈಕ್ಷಣಿಕ | – | 147 | 100.00 |
| **5** | ಕೌಶಲ್ಯಾಭಿವೃದ್ಧಿ ತರಬೇತಿ ಯೋಜನೆ. | – | 156 | 25.00 |
| | **ಒಟ್ಟು** | – | **2524** | **1500.00** |

1. **ತಿಗಳ ಸಮುದಾಯಕ್ಕೆ ಸೇರಿದ ಉಪ ಜಾತಿಗಳು:** ತಿಗಲ, ಅಗ್ನಿವಂಶ, ಅಗ್ನಿವನ್ನಿ, ಅಗ್ನಿಕುಲಕ್ಷತ್ರಿಯ, ಧರ್ಮರಾಜ ಕಾಪು, ಪಳ್ಳಿ, ಶಂಭುಕುಲ ಕ್ಷತ್ರಿಯ, ತಿಗಳ ವನ್ನಿಯರ್, ವನ್ನಿಕುಲಕ್ಷತ್ರಿಯ, ತಿಗ್ಲರ್, ಕುರೋವನ್.

2. **ತಿಗಳ ಸಮಾಜದವರ ಸಾಂಪ್ರದಾಯಿಕ ವೃತ್ತಿಯಾದ ತರಕಾರಿ ಹೂ ಮಾರಾಟಕ್ಕೆ ಆರ್ಥಿಕ ನೆರವು.**

   1. ಘಟಕ ವೆಚ್ಚ ರೂ.50,000/-ಗಳಿಗೆ ಶೇ.30 ರಷ್ಟು ಗರಿಷ್ಟ ರೂ.10,000/-ಗಳ ಸಹಾಯಧನ ಉಳಿಕೆ ಶೇ.70 ರಷ್ಟು ರೂ.40,000/-ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.
   2. ಘಟಕ ವೆಚ್ಚ ರೂ.50,001/-ರಿಂದ ರೂ.1,00,000/-ಗಳವರೆಗೆ ಶೇ.20 ರಷ್ಟು ಗರಿಷ್ಟ ರೂ.20,000/-ಗಳ ಸಹಾಯಧನ ಉಳಿಕೆ ಶೇ.80 ರಷ್ಟು ರೂ.80,000/-ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.
   3. ಘಟಕ ವೆಚ್ಚ ರೂ.1,00,001/-ರಿಂದ ರೂ.2,00,000/-ಗಳವರೆಗೆ ಶೇ.15 ರಷ್ಟು ಕನಿಷ್ಟ ರೂ.20,000/-ಗಳ ಗರಿಷ್ಟ ರೂ.30,000/-ಗಳ ಸಹಾಯಧನ ಉಳಿಕೆ ಶೇ.85 ರಷ್ಟು ರೂ.1,70,000/-ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.

**2.** ತರಕಾರಿ ಮತ್ತು ಹೂ ಬೆಳೆಯುವ ತಿಗಳ ಸಮುದಾಯದವರಿಗೆ ಗರಿಷ್ಟ ರೂ.2.00 ಲಕ್ಷಗಳವರೆಗೆ ಆರ್ಥಿಕ ನೆರವು. ಶೇ.15ರಷ್ಟು ಗರಿಷ್ಠ ರೂ.30,000/-ಗಳ ಸಹಾಯಧನ ಹಾಗೂ ಉಳಿಕೆ ಶೇ.85 ಗರಿಷ್ಟ ರೂ.1,70,000 ಗಳನ್ನು ಶೇ.2ರ ಬಡ್ಡಿದರದಲ್ಲಿ ಸಾಲ.

3. **ಸ್ವಯಂ ಉದ್ಯೋಗ ಕೈಗೊಳ್ಳಲು ಸಾಂಪ್ರದಾಯಿಕ ವೃತ್ತಿಯಲ್ಲದ ಚಟುವಟಿಕೆಗಳಿಗೆ ಸಾಲ ಮತ್ತು ಸಹಾಯಧನದ ಸೌಲಭ್ಯ.**

**ಆರ್ಥಿಕ ಚಟುವಟಿಕೆ ಅನುಸಾರ**

1. ಘಟಕ ವೆಚ್ಚ ರೂ.50,000/-ಗಳಿಗೆ ಶೇ.30 ರಷ್ಟು ಗರಿಷ್ಠ ರೂ.10,000/-ಗಳ ಸಹಾಯಧನ ಉಳಿಕೆ ಶೇ.70 ರಷ್ಟು ರೂ.40,000/-ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.
2. ಘಟಕ ವೆಚ್ಚ ರೂ.50,001/-ರಿಂದ ರೂ.1,00,000/-ಗಳವರೆಗೆ ಶೇ.20 ರಷ್ಟು ಗರಿಷ್ಠ ರೂ.20,000/-ಗಳ ಸಹಾಯಧನ ಉಳಿಕೆ ಶೇ.80 ರಷ್ಟು ರೂ.80,000/-ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.
3. ಘಟಕ ವೆಚ್ಚ ರೂ.1,00,001/-ರಿಂದ ರೂ.2,00,000/-ಗಳವರೆಗೆ ಶೇ.15 ರಷ್ಟು ಕನಿಷ್ಟ ರೂ.20,000/-ಗಳ ಗರಿಷ್ಠ ರೂ.30,000/-ಗಳ ಸಹಾಯಧನ ಉಳಿಕೆ ಶೇ.85 ರಷ್ಟು ರೂ.1,70,000/-ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.

4. **ಗಂಗಾ ಕಲ್ಯಾಣ ನೀರಾವರಿ ಯೋಜನೆ:** ತಿಗಳ ಸಮುದಾಯದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗಂಗಾ ಕಲ್ಯಾಣ ನೀರಾವರಿ ಯೋಜನೆಯ ಘಟಕ ವೆಚ್ಚದಲ್ಲಿ ನೀರಾವರಿ ಸೌಲಭ್ಯ ಒದಗಿಸಲಾಗುವುದು. ಕನಿಷ್ಠ 2 ಎಕರೆ ಜಮೀನು ಹೊಂದಿರುವ 3ಕಿಂತ ಹೆಚ್ಚು ಜನರಿಗೆ ಸಾಮೂಹಿಕವಾಗಿ ಒಂದೇಕಡೆ ಹೊಂದಿಕೊಂಡಿರುವ 8 ಎಕರೆ ಜಮೀನಿಗೆ ಸಾಮೂಹಿಕ ನೀರಾವರಿ ಘಟಕ ವೆಚ್ಚದಲ್ಲಿ ನೀರಾವರಿ ಸೌಲಭ್ಯ ಒದಗಿಸಲಾಗುವುದು.
5. **ಶೈಕ್ಷಣಿಕ ಸಾಲ:** ಮಡಿವಾಳ ಸಮುದಾಯದ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಲು ಅರಿವು ಶೈಕ್ಷಣಿಕ ಸಾಲ ಯೋಜನೆಯಲ್ಲಿ ವಾರ್ಷಿಕ ಗರಿಷ್ಠ ರೂ.1,00,000/-ಗಳ ವರೆಗೆ ಶೇ.2ರ ಬಡ್ಡಿ ದರದಲ್ಲಿ ಆರ್ಥಿಕ ನೆರವು
6. **ಕೌಶಲ್ಯಾಭಿವೃದ್ಧಿ ತರಬೇತಿ:** ಆ್ಯನಿಮೇಷನ್, ಆಟೋಕ್ಯಾಡ್, ಸೌಂಡ್‌ಇಂಜಿನಿಯರಿಂಗ್, ಡಿ.ಟಿ.ಪಿ. ತರಬೇತಿ, ವಾಹನ ಚಾಲನ ತರಬೇತಿ, ರೆಡಿಮೇಡ್ ಗಾರ್ಮೆಂಟ್ಸ್ ತರಬೇತಿ. ಇತ್ಯಾದಿ.

**4 ಸಮುದಾಯಗಳ ಸ್ವಯಂ ಉದ್ಯೋಗ ಸಾಲ ಯೋಜನೆಯ ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ-...... ರಲ್ಲಿ ಪುಟ ಸಂಖ್ಯೆ: ......... ರಿಂದ .......... ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ-........... ರಲ್ಲಿ ಪುಟ ಸಂಖ್ಯೆ: ........... ರಲ್ಲಿ ಇರಿಸಿದೆ.**

**ಮಡಿವಾಳ, ತಿಗಳ, ಕುಂಬಾರ ಹಾಗೂ ಸವಿತ ಸಮಾಜಗಳ ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆಯ ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ-5 ರಲ್ಲಿ ಪುಟ ಸಂಖ್ಯೆ: ........... ರಿಂದ ........... ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ-06 ರಲ್ಲಿ ಪುಟ ಸಂಖ್ಯೆ: .......... ರಲ್ಲಿ ಇರಿಸಿದೆ.**

**4 ಸಮುದಾಯಗಳ ಗಂಗಾ ಕಲ್ಯಾಣ ಯೋಜನೆಯ ಜಿಲ್ಲಾವಾರು ಗುರಿಯನ್ನು ಅನುಬಂಧ-......... ರಲ್ಲಿ ಪುಟ ಪುಟ ಸಂಖ್ಯೆ: .......... ರಲ್ಲಿ ಇರಿಸಿದೆ.**

## XI. ಕುಂಬಾರ ಸಮಾಜದ ಅಭಿವೃದ್ಧಿ ಕಾರ್ಯಕ್ರಮಗಳು:

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ಉದ್ದೇಶಗಳು | | ಭೌತಿಕ | ಆರ್ಥಿಕ |
|---|---|---|---|---|
| 1 | ಸಾಂಪ್ರದಾಯಿಕ ವೃತ್ತಿ ನಿರ್ವಹಣೆಗೆ | – | 1400 | 700.00 |
| 2 | ಸ್ವಯಂ ಉದ್ಯೋಗ ಸಾಲ | – | 534 | 400.00 |
| 3 | ಗಂಗಾ ಕಲ್ಯಾಣ ನೀರಾವರಿ ಯೋಜನೆ | | 136 | 300.00 |
| 4 | ಶೈಕ್ಷಣಿಕ ಸಾಲ ಯೋಜನೆ | – | 100 | 75.00 |
| 5 | ಕೌಶಲ್ಯಾಭಿವೃದ್ಧಿ ತರಬೇತಿ | – | 156 | 25.00 |
| | **ಒಟ್ಟು** | – | **2326** | **1500.00** |

1. **ಕುಂಬಾರ ಸಮುದಾಯಕ್ಕೆ ಸೇರಿದ ಉಪ ಜಾತಿಗಳು:** ಕುಂಬಾರ, ಚಕ್ರಸಾಲಿ, ಗುಣಗ, ಗಣಿಗ, ಕೊಯವ, ಕುಲ, ಕುಲಾಲ, ಕುಂಬಾರ್, ಕುಂಬಾರ್ಡ್, ಕುಮ್ಮಾರ, ಕುಸವನ್, ಮೂಲ್ಯ, ಸಜ್ಜನಕುಂಬಾರ, ಖುಂಭಾರ, ಕುಂಭಾರ, ಕುಲಾಲರ್.

2. **ಕುಂಬಾರ ಸಮಾಜದವರ ಸಾಂಪ್ರದಾಯಿಕ ವೃತ್ತಿಯಾದ ಕುಂಬಾರಿಕೆ ವೃತ್ತಿ ನಿರ್ವಹಿಸಲು ಆರ್ಥಿಕ ನೆರವು:**

    1. ಘಟಕ ವೆಚ್ಚ ರೂ.50,000/–ಗಳಿಗೆ ಶೇ.30 ರಷ್ಟು ಗರಿಷ್ಠ ರೂ.10,000/–ಗಳ ಸಹಾಯಧನ ಉಳಿಕೆ ಶೇ.70 ರಷ್ಟು ರೂ.40,000/–ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.
    2. ಘಟಕ ವೆಚ್ಚ ರೂ.50,001/–ರಿಂದ ರೂ.1,00,000/–ಗಳವರೆಗೆ ಶೇ.20 ರಷ್ಟು ಗರಿಷ್ಠ ರೂ.20,000/–ಗಳ ಸಹಾಯಧನ ಉಳಿಕೆ ಶೇ.80 ರಷ್ಟು ರೂ.80,000/–ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.
    3. ಘಟಕ ವೆಚ್ಚ ರೂ.1,00,001/–ರಿಂದ ರೂ.2,00,000/–ಗಳವರೆಗೆ ಶೇ.15 ರಷ್ಟು ಕನಿಷ್ಠ ರೂ.20,000/–ಗಳ ಗರಿಷ್ಠ ರೂ.30,000/–ಗಳ ಸಹಾಯಧನ ಉಳಿಕೆ ಶೇ.85 ರಷ್ಟು ರೂ.1,70,000/–ಗಳನ್ನು ಶೇ.2ರ ಬಡ್ಡಿ ದರದಲ್ಲಿ ಸಾಲ.

2. **ಸ್ವಯಂ ಉದ್ಯೋಗ ಕೈಗೊಳ್ಳಲು ಸಾಂಪ್ರದಾಯಿಕ ವೃತ್ತಿಯಲ್ಲದ ಚಟುವಟಿಕೆಗಳಿಗೆ ಸಾಲ ಮತ್ತು ಸಹಾಯಧನದ ಸೌಲಭ್ಯ:**

**ಆರ್ಥಿಕ ಚಟುವಟಿಕೆ ಅನುಸಾರ**

1. ಘಟಕ ವೆಚ್ಚ ರೂ.50,000/–ಗಳಿಗೆ ಶೇ.30 ರಷ್ಟು ಗರಿಷ್ಠ ರೂ.10,000/–ಗಳ ಸಹಾಯಧನ ಉಳಿಕೆ ಶೇ.70 ರಷ್ಟು ರೂ.40,000/–ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.
2. ಘಟಕ ವೆಚ್ಚ ರೂ.50,001/–ರಿಂದ ರೂ.1,00,000/–ಗಳವರೆಗೆ ಶೇ.20 ರಷ್ಟು ಗರಿಷ್ಠ ರೂ.20,000/–ಗಳ ಸಹಾಯಧನ ಉಳಿಕೆ ಶೇ.80 ರಷ್ಟು ರೂ.80,000/–ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.

3. ಘಟಕ ವೆಚ್ಚ ರೂ.1,00,001/–ರಿಂದ ರೂ.2,00,000/–ಗಳವರೆಗೆ ಶೇ.15 ರಷ್ಟು ಕನಿಷ್ಟ ರೂ.20,000/–ಗಳ ಗರಿಷ್ಟ ರೂ.30,000/–ಗಳ ಸಹಾಯಧನ ಉಳಿಕೆ ಶೇ.85 ರಷ್ಟು ರೂ.1,70,000/–ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.

5. **ಗಂಗಾ ಕಲ್ಯಾಣ ನೀರಾವರಿ ಯೋಜನೆ:** ಕುಂಬಾರ ಸಮುದಾಯದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗಂಗಾ ಕಲ್ಯಾಣ ನೀರಾವರಿ ಯೋಜನೆಯ ಘಟಕ ವೆಚ್ಚದಲ್ಲಿ ನೀರಾವರಿ ಸೌಲಭ್ಯ ಒದಗಿಸಲಾಗುವುದು.

6. **ಶೈಕ್ಷಣಿಕ ಸಾಲ:** ಮಡಿವಾಳ ಸಮುದಾಯದ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಲು ಅರಿವು ಶೈಕ್ಷಣಿಕ ಸಾಲ ಯೋಜನೆಯಲ್ಲಿ ವಾರ್ಷಿಕ ಗರಿಷ್ಠ ರೂ.1,00,000/–ಗಳ ವರೆಗೆ ಶೇ.2ರ ಬಡ್ಡಿ ದರದಲ್ಲಿ ಆರ್ಥಿಕ ನೆರವು.

7. **ಕೌಶಲ್ಯಾಭಿವೃದ್ಧಿ ತರಬೇತಿ:** ಕುಂಬಾರಿಕೆ ಕಲಾತ್ಮಕ ಉತ್ಪನ್ನಗಳ ತಯಾರಿಕೆ, ಡಿ.ಟಿ.ಪಿ. ತರಬೇತಿ, ವಾಹನ ಚಾಲನ ತರಬೇತಿ, ರೆಡಿಮೇಡ್ ಗಾರ್ಮೆಂಟ್ಸ್ ತರಬೇತಿ ಇತ್ಯಾದಿ.

**4 ಸಮುದಾಯಗಳ ಸ್ವಯಂ ಉದ್ಯೋಗ ಸಾಲ ಯೋಜನೆಯ ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ–...... ರಲ್ಲಿ ಪುಟ ಸಂಖ್ಯೆ: ......... ರಿಂದ .......... ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ–............ ರಲ್ಲಿ ಪುಟ ಸಂಖ್ಯೆ: ...........ರಲ್ಲಿ ಇರಿಸಿದೆ.**

**ಮಡಿವಾಳ, ತಿಗಳ, ಕುಂಬಾರ ಹಾಗೂ ಸವಿತ ಸಮಾಜಗಳ ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆಯ ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ–............ ರಲ್ಲಿ ಪುಟ ಸಂಖ್ಯೆ: ........... ರಿಂದ ........... ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ–.......... ರಲ್ಲಿ ಪುಟ ಸಂಖ್ಯೆ: .......... ರಲ್ಲಿ ಇರಿಸಿದೆ.**

**4 ಸಮುದಾಯಗಳ ಗಂಗಾ ಕಲ್ಯಾಣ ಯೋಜನೆಯ ಜಿಲ್ಲಾವಾರು ಗುರಿಯನ್ನು ಅನುಬಂಧ–......... ರಲ್ಲಿ ಪುಟ ಪುಟ ಸಂಖ್ಯೆ: .......... ರಲ್ಲಿ ಇರಿಸಿದೆ.**

## XII. ಅತ್ಯಂತ/ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಯುವಜನರ ಆರ್ಥಿಕ ಸಶಕ್ತೀಕರಣಕ್ಕಾಗಿ ಆರ್ಥಿಕ ನೆರವು ಯೋಜನೆ:

ಡಾ॥ ಡಿ.ಎಂ.ನಂಜುಂಡಪ್ಪ ವರದಿಯಲ್ಲಿ ಗುರುತಿಸಿರುವ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳು ಹಾಗೂ ಅತಿ ಹಿಂದುಳಿದ 40 ತಾಲ್ಲೂಕುಗಳು ಹೀಗೆ ಒಟ್ಟು 79 ತಾಲ್ಲೂಕುಗಳಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುವ 10 ಸದಸ್ಯರನ್ನು ಒಳಗೊಂಡ ಸ್ವ ಸಹಾಯ ಗುಂಪುಗಳಿಗೆ ಆರ್ಥಿಕ ನೆರವನ್ನು ಒದಗಿಸುವುದು.

ಈ ಸ್ವ ಸಹಾಯ ಗುಂಪುಗಳ ಮೂಲಕ ಗ್ರಾಮ ಮಟ್ಟದಲ್ಲಿ ಜನರಿಗೆ ಅವಶ್ಯವಿರುವ ಸೇವೆಗಳನ್ನು/ಕಾಮಗಾರಿಗಳನ್ನು ನಿರ್ವಹಿಸಲು ಚಟುವಟಿಕೆ ಅನುಸಾರ ಪ್ರತಿ ಸದಸ್ಯರಿಗೆ ಗರಿಷ್ಠ ರೂ.35000/–ಗಳಂತೆ ಆರ್ಥಿಕ ನೆರವು. ಇದರಲ್ಲಿ, ಶೇ.30ರಷ್ಟು ಗರಿಷ್ಠ ರೂ.10000/–ಗಳ ಸಹಾಯಧನ, ಉಳಿಕೆ ಮೊತ್ತ ಶೇ.70ರಷ್ಟು ಗರಿಷ್ಠ ರೂ.25000/–ಗಳು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಒದಗಿಸಲಾಗುವುದು. ಹೀಗೆ ಪ್ರತಿ ಗುಂಪಿಗೆ ಗರಿಷ್ಠ ರೂ.3.50ಲಕ್ಷಗಳ ಆರ್ಥಿಕ ನೆರವನ್ನು ಒದಗಿಸುವುದು.

**ಈ ಯೋಜನೆಯಲ್ಲಿ 79 ತಾಲ್ಲೂಕು/ವಿಧಾನಸಭಾ ಕ್ಷೇತ್ರಗಳಿಗೆ ನಿಗದಿಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿಯನ್ನು ಅನುಬಂಧ–............ ರಲ್ಲಿ, ಪುಟ ಸಂಖ್ಯೆ: ....... ರಿಂದ .......... ರಲ್ಲಿ ನೀಡಲಾಗಿದೆ.**

**XIII. ಹಿಂದುಳಿದ ವರ್ಗಗಳ ವಿಧವೆಯರಿಗೆ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಸಾಲ ಮತ್ತು ಸಹಾಯಧನ ಯೋಜನೆ:**

2017–18ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಹಿಂದುಳಿದ ವರ್ಗಗಳ ವಿಧವೆಯರು ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು 40,000/– ರೂ.ಗಳ (10,000/– ರೂ. ಸಹಾಯಧನ ಮತ್ತು ಶೇ. 4ರ ಬಡ್ಡಿ ದರದಲ್ಲಿ 30,000/– ರೂ.ಸಾಲ) ಆರ್ಥಿಕ ನೆರವನ್ನು ನೀಡಲಾಗುವುದು" ಎಂದು ಘೋಷಿಸಲಾಗಿರುತ್ತದೆ.

ಸದರಿ ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ವಿಧವೆಯರು ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು 40,000/– ರೂ.ಗಳನ್ನು ಒದಗಿಸಲಾಗುವುದು. ಇದರಲ್ಲಿ, 10,000/– ರೂ. ಸಹಾಯಧನ ಉಳಿಕೆ ಮೊತ್ತ ಶೇ.4ರ ಬಡ್ಡಿ ದರದಲ್ಲಿ ಸಾಲವಾಗಿರುತ್ತದೆ.

**ಈ ಯೋಜನೆಯಲ್ಲಿ ನಿಗಿದಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿಯನ್ನು ಅನುಬಂಧ: ......ರಲ್ಲಿ ಪುಟ ಸಂಖ್ಯೆ: ........ ರಿಂದ ............ರಲ್ಲಿ ನೀಡಲಾಗಿದೆ.**

**XIV. ಹಿಂದುಳಿದ ವರ್ಗಗಳ ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿ/ಸರಕು ಸಾಗಾಣಿಕಾ ವಾಹನ ಕೊಳ್ಳಲು ಸಹಾಯಧನ ಯೋಜನೆ:**

2017–18ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ವಾಹನ ಚಾಲನಾ ಪರವಾನಗಿಯನ್ನು ಹೊಂದಿರುವ 1000 ಹಿಂದುಳಿದ ವರ್ಗಗಳ ನಿರುದ್ಯೋಗಿ ಯುವಕರಿಗೆ ಶೇ.50ರಷ್ಟು ಟೂರಿಸ್ಟ್ ಟ್ಯಾಕ್ಸಿಗಳನ್ನು ಹಾಗೂ ಶೇ.50ರಷ್ಟು ಸರಕು ಸಾಗಾಣಿಕೆ ವಾಹನ ಖರೀದಿಸಲು 3 ಲಕ್ಷ ರೂ.ಗಳವರೆಗೆ ಅಥವಾ ವಾಹನದ ಶೇ.50ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಹಾಯಧನ ನೀಡಲಾಗುವುದು. ಉಳಿದ ಮೊತ್ತವನ್ನು ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಪಡೆಯಬಹುದು" ಎಂದು ಘೋಷಿಸಲಾಗಿರುತ್ತದೆ.

ಅದರಂತೆ, ಟೂರಿಸ್ಟ್ ಟ್ಯಾಕ್ಸಿ/ಸರಕು ಸಾಗಾಣಿಕೆ ವಾಹನ ಖರೀದಿಸಲು ಫಲಾನುಭವಿಗಳನ್ನು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಆಯ್ಕೆ ಸಮಿತಿಯ ಮೂಖಾಂತರ ಫಲಾನುಭವಿಗಳನ್ನು ಆಯ್ಕೆ ಮಾಡಿ ಬ್ಯಾಂಕ್‌ಗಳ ಸಹಯೋಗದೊಂದಿಗೆ ಮಂಜೂರು ಮಾಡಲಾಗುವುದು.

**ಸೌಲಭ್ಯ:** ಸಹಾಯಧನದ ಮೊತ್ತ ರೂ.3.00ಲಕ್ಷಗಳ ವರೆಗೆ ಅಥವಾ ವಾಹನದ ಖರೀದಿ ಬೆಲೆಯ ಶೇ.50ರಷ್ಟು ಇವುಗಳಲ್ಲಿ ಯಾವುದೂ ಕಡಿಮೆಯೋ ಅಷ್ಟು ಸಹಾಯಧನವನ್ನು ನಿಗಮದಿಂದ ಮಂಜೂರು ಮಾಡುವುದು. ಉಳಿಕೆ ಮೊತ್ತವನ್ನು ಬ್ಯಾಂಕ್‌ಗಳಿಂದ ನಿಗದಿಪಡಿಸಿದ ಬಡ್ಡಿದರದಲ್ಲಿ ಸಾಲದ ರೂಪದಲ್ಲಿ ಒದಗಿಸಲಾಗುವುದು.

**ಈ ಯೋಜನೆಯಲ್ಲಿ ನಿಗಿದಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿಯನ್ನು ಅನುಬಂಧ: ......ರಲ್ಲಿ ಪುಟ ಸಂಖ್ಯೆ: ........ ರಿಂದ ............ರಲ್ಲಿ ನೀಡಲಾಗಿದೆ.**

**XV. ಸಾರಾಯಿ ಮಾರಾಟ ನಿಷೇದದಿಂದಾದ ನಿರುದ್ಯೋಗಿಗಳಾದ ಸಾರಾಯಿ ವೆಂಡರು, ಮೂರ್ತೆದಾರ, ಈಡಿಗ ಇತ್ಯಾಧಿ ಸಮುದಾಯಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವು:**

2017–18ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಸಾರಾಯಿ ಮಾರಾಟ ನಿಷೇಧದಿಂದ ಉದ್ಯೋಗ ಕಳೆದುಕೊಂಡಿರುವ ಸಾರಾಯಿ ವೆಂಡರು, ಮೂರ್ತೆದಾರ, ಈಡಿಗ ಇತ್ಯಾದಿ ಸಮುದಾಯಗಳು ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವು ನೀಡಲಾಗುವುದು." ಎಂದು ಘೋಷಿಸಲಾಗಿರುತ್ತದೆ.

ಸಾರಾಯಿ ಮಾರಾಟ ನಿಷೇದದಿಂದ ಉದ್ಯೋಗ ಕಳೆದುಕೊಂಡಿರುವ ಸಾರಾಯಿ ವೆಂಡರ್/ಮೂರ್ತೆದಾರರ/ಈಡಿಗ ಇತ್ಯಾಧಿ ಸಮುದಾಯಗಳು ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ಚಟುವಟಿಕೆ ಅನುಸಾರ ಸ್ವಯಂ ಉದ್ಯೋಗ ನೇರ ಸಾಲ ಯೋಜನೆಯಲ್ಲಿ ಗರಿಷ್ಠ ರೂ.2.00ಲಕ್ಷಗಳ ವರೆಗೆ ಸಾಲ ಶೇ.4ರ ಬಡ್ಡಿದರದಲ್ಲಿ ಒದಗಿಸಲಾಗುವುದು. ಈ ಮೊತ್ತದಲ್ಲಿ ಶೇ.15 ರಷ್ಟು ಸಹಾಯಧನ ಒದಗಿಸಲಾಗುವುದು.

**ಈ ಯೋಜನೆಯಲ್ಲಿ ನಿಗಿದಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿಯನ್ನು ಅನುಬಂಧ: ......ರಲ್ಲಿ ಪುಟ ಸಂಖ್ಯೆ: ........ ರಿಂದ ............ರಲ್ಲಿ ನೀಡಲಾಗಿದೆ.**

## II. ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆಗಳು:

ಸರ್ಕಾರದ ಆದೇಶ ಸಂಖ್ಯೆ: ಹಿಂವಕ 31 ಸಮನ್ವಯ 2013, ಬೆಂಗಳೂರು ದಿನಾಂಕ: 25/02/2013ರನ್ವಯ ಈ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ಫಲಾನುಭವಿಗಳ ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಬೇಕು.

### 1. ಅವಧಿ ಸಾಲ ಯೋಜನೆ:

ಈ ಯೋಜನೆಯಲ್ಲಿ ಕೃಷಿ ಮತ್ತು ಕೃಷಿ ಅವಲಂಬಿತ ಚಟುವಟಿಕೆಗಳು, ಸಣ್ಣ ವ್ಯಾಪಾರ, ಸೇವಾ ವಲಯ, ಸಾರಿಗೆ ವಲಯ, ಶೈಕ್ಷಣಿಕ, ನ್ಯೂ ಸ್ವರ್ಣಿಮಾ, ಶಿಲ್ಪಸಂಪದ, ಸ್ವಯಂ ಸಕ್ಷಮ, ಮೈಕ್ರೋ ಫೈನಾನ್ಸ್ ಮತ್ತು ಕೃಷಿ ಸಂಪದ ವಲಯಗಳಲ್ಲಿ ಸಾಲ ಸೌಲಭ್ಯ ಒದಗಿಸಲಾಗುವುದು.

**ಅರ್ಹತೆ:** ಬಡತನ ರೇಖೆಗಿಂತ ದುಪ್ಪಟ್ಟು ಆದಾಯ ಹೊಂದಿರುವ ಹಿಂದುಳಿದ ವರ್ಗಗಳ ಜನರು ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವನ್ನು ಒದಗಿಸಲಾಗುವುದು.

- **ಗರಿಷ್ಠ ಸಾಲದ ಮೊತ್ತ** : ರೂ.10.00 ಲಕ್ಷಗಳು (ಪ್ರತಿ ಫಲಾನುಭವಿಗೆ)
- **ಬಡ್ಡಿ ದರ** : ವಾರ್ಷಿಕ ಶೇ.6 ರಿಂದ 8ರಷ್ಟು.
- **ಮರುಪಾವತಿ ಅವಧಿ** : 36 ರಿಂದ 60 ತಿಂಗಳು.
- **ವಯೋಮಿತಿ** : 18 ರಿಂದ 55 ವರ್ಷಗಳು
- **ವಾರ್ಷಿಕ ಆದಾಯದ ಮಿತಿ** : ಗ್ರಾಮಾಂತರ ಪ್ರದೇಶದವರಿಗೆ ವಾರ್ಷಿಕ ರೂ.98,000/–ಗಳಿಗಿಂತ ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,20,000/–ಗಳಿಗಿಂತ ಕಡಿಮೆ ಇರಬೇಕು.

**2. <u>ನ್ಯೂ ಸ್ವರ್ಣಿಮಾ ಯೋಜನೆ:</u>**

ಮಹಿಳೆಯರ ಸಬಲೀಕರಣಕ್ಕೆ ಹಾಗೂ ಅರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಈ ಯೋಜನೆಯಲ್ಲಿ ವೈಯಕ್ತಿಕವಾಗಿ ಆರ್ಥಿಕ ನೆರವು ಒದಗಿಸಲಾಗುವುದು.

- **ಗರಿಷ್ಠ ಸಾಲದ ಮೊತ್ತ** : ರೂ.1,00,000/–ಗಳು (ಪ್ರತಿ ಫಲಾನುಭವಿಗೆ)
- **ಬಡ್ಡಿ ದರ** : ವಾರ್ಷಿಕ ಶೇ.5ರಷ್ಟು.
- **ಮರುಪಾವತಿ ಅವಧಿ** : 48 ತಿಂಗಳು.(16 ತ್ರೈಮಾಸಿಕ)
- **ವಯೋಮಿತಿ** : 18 ರಿಂದ 55 ವರ್ಷಗಳು.
- **ವಾರ್ಷಿಕ ಆದಾಯದ ಮಿತಿ** : ಗ್ರಾಮಾಂತರ ಪ್ರದೇಶದವರಿಗೆ ವಾರ್ಷಿಕ ರೂ.98,000/–ಗಳಿಗಿಂತ ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,20,000/–ಗಳಿಗಿಂತ ಕಡಿಮೆ ಇರಬೇಕು.

**3. <u>ಶೈಕ್ಷಣಿಕ ಸಾಲ ಯೋಜನೆ:</u>**

ಇಂಜಿನಿಯರಿಂಗ್, ವೈದ್ಯಕೀಯ, ಡೆಂಟಲ್, ಕಂಪ್ಯೂಟರ್, ಚಾರ್ಟ್‌ಡ್ ಅಕೌಂಟೆಂಟ್, ಎಂ.ಬಿ.ಎ., ಹೋಟೇಲ್ ಮ್ಯಾನೇಜ್‌ಮೆಂಟ್, ಪಶುವೈದ್ಯಕೀಯ, ಕಾನೂನು, ಐ.ಸಿ.ಡಬ್ಲ್ಯೂ.ಎ., ಮುಂತಾದ ಎ.ಐ.ಸಿ.ಟಿ.ಇ.ಯಿಂದ, ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ, ಮತ್ತು ಯು.ಜಿ.ಸಿ.ಯಿಂದ ಅನುಮೋದಿತ ಕೋರ್ಸ್‌ಗಳಲ್ಲಿ ಪದವಿ ಮತ್ತು ಸ್ನಾತಕೋತ್ತರಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ಒದಗಿಸಲಾಗುವುದು.

- **ಗರಿಷ್ಠ ಸಾಲದ ಮೊತ್ತ** : ವರ್ಷಕ್ಕೆ ರೂ.2.50ಲಕ್ಷಗಳು.
  (ಭಾರತದಲ್ಲಿನ ವ್ಯಾಸಂಗಕ್ಕೆ ಒಟ್ಟು ರೂ.10.00ಲಕ್ಷಗಳು ಪೂರ್ಣ ಕೋರ್ಸ್‌ಗೆ)
  (ವಿದೇಶದಲ್ಲಿನ ವ್ಯಾಸಂಗಕ್ಕೆ ಒಟ್ಟು ರೂ.20.00ಲಕ್ಷಗಳು ಪೂರ್ಣ ಕೋರ್ಸ್‌ಗೆ)
- **ಬಡ್ಡಿ ದರ** : ವಾರ್ಷಿಕ ಶೇ.4ರಷ್ಟು.
  ವಿದ್ಯಾರ್ಥಿನಿಯರಿಗೆ ಶೇ.3.5ರಷ್ಟು
- **ಮರುಪಾವತಿ ಅವಧಿ** : 60 ತಿಂಗಳು (ರೂ.3.00ಲಕ್ಷಗಳಿಂದ ರಿಂದ ರೂ.5.00ಲಕ್ಷಗಳಿಗೆ 34 ಮಾಸಿಕ ರೂ.5.00 ರಿಂದ ರೂ.10.00ಲಕ್ಷಗಳಿಗೆ 120 ತಿಂಗಳು) ವ್ಯಾಸಂಗ ಪೂರ್ಣಗೊಂಡ 6 ತಿಂಗಳ ನಂತರ ಕಂತುಗಳ ಪ್ರಾರಂಭ.
- **ವಯೋಮಿತಿ** : 18 ರಿಂದ 32 ವರ್ಷಗಳು.
- **ವಾರ್ಷಿಕ ಆದಾಯದ ಮಿತಿ** : ಗ್ರಾಮಾಂತರ ಪ್ರದೇಶದವರಿಗೆ ವಾರ್ಷಿಕ ರೂ.98,000/–ಗಳಿಗಿಂತ ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,20,000/–ಗಳಿಗಿಂತ ಕಡಿಮೆ ಇರಬೇಕು.

**4. <u>ಸ್ವಯಂ ಸಕ್ಷಮ ಸಾಲ ಯೋಜನೆ:</u>**

ವೃತ್ತಿ ಶಿಕ್ಷಣ ಪಡೆದ ಹಿಂದುಳಿದ ವರ್ಗಗಳ ವಿದ್ಯಾವಂತ ಅಭ್ಯರ್ಥಿಗಳು ವಕೀಲ ವೃತ್ತಿ, ವೈದ್ಯ ವೃತ್ತಿ, ಇಂಜಿನಿಯರಿಂಗ್ ವೃತ್ತಿ, ಚಾರ್ಟೆಡ್ ಅಕೌಂಟೆಂಟ್ ವೃತ್ತಿ, ನರ್ಸಿಂಗ್ ಹೋಮ್, ಬಯೋ ಮೆಡಿಕಲ್ ಲ್ಯಾಬ್ಸ್, ಫಿಜಿಯೋಥೆರಫಿ ಲ್ಯಾಬ್ ಇತ್ಯಾದಿ ವೃತ್ತಿ ಘಟಕ ಸ್ಥಾಪಿಸಲು ಆರ್ಥಿಕ ನೆರವು ಒದಗಿಸಲಾಗುವುದು.

| | | |
|---|---|---|
| • ಗರಿಷ್ಠ ಸಾಲದ ಮೊತ್ತ | : | ರೂ.10.00ಲಕ್ಷಗಳು. |
| • ಬಡ್ಡಿ ದರ | : | ರೂ.5.00ಲಕ್ಷಗಳ ವರೆಗೆ ವಾರ್ಷಿಕ ಶೇ.6.ರಷ್ಟು ರೂ.5.00ಲಕ್ಷಕ್ಕಿಂತ ಹೆಚ್ಚಿನ ಘಟಕಗಳಿಗೆ ಸಾಲಕ್ಕೆ ವಾರ್ಷಿಕ ಶೇ.8ರಷ್ಟು |
| • ಮರುಪಾವತಿ ಅವಧಿ | : | 60 ತಿಂಗಳು. |
| • ವಯೋಮಿತಿ | : | 18 ರಿಂದ 35 ವರ್ಷಗಳು. |
| • ವಾರ್ಷಿಕ ಆದಾಯದ ಮಿತಿ | : | ಗ್ರಾಮಾಂತರ ಪ್ರದೇಶದವರಿಗೆ ವಾರ್ಷಿಕ ರೂ.98,000/- ಗಳಿಗಿಂತ ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,20,000/- ಗಳಿಗಿಂತ ಕಡಿಮೆ ಇರಬೇಕು. |

**5. ಮೈಕ್ರೋ ಫೈನಾನ್ಸ್ ಯೋಜನೆ:**

ಈ ಯೋಜನೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಹಿಂದುಳಿದ ವರ್ಗಗಳ ಜನರಿಗೆ ಸಣ್ಣ ಸಣ್ಣ ಆರ್ಥಿಕ ಚಟುವಟಿಕೆಗಳಿಗೆ ಸಾಲವನ್ನು ಮಂಜೂರು ಮಾಡಲಾಗುವುದು. ಈ ಸಾಲವನ್ನು ವೈಯಕ್ತಿಕವಾಗಿ ಆಥವಾ ಸ್ವ ಸಹಾಯ ಗುಂಪುಗಳ ಮುಖಾಂತರ ಮಂಜೂರು ಮಾಡಲಾಗುವುದು.

**ಸಾಲದ ವಿವರ:**

| | | | |
|---|---|---|---|
| 1. | ರಾಷ್ಟ್ರೀಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | : | ಶೇ. 90ರಷ್ಟು . |
| 2. | ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | : | ಶೇ. 5ರಷ್ಟು |
| 3. | ಫಲಾನುಭವಿ ವಂತಿಕೆ | : | ಶೇ. 5ರಷ್ಟು. |
| 4. | ಗರಿಷ್ಟ ಸಾಲದ ಮೊತ್ತ ಪ್ರತಿ ಫಲಾನುಭವಿಗೆ | : | ರೂ.50,000/- |
| 5. | ಬಡ್ಡಿ ದರ | : | ವಾರ್ಷಿಕ ಶೇ.5. |
| 6. | ಮರುಪಾವತಿ ಅವಧಿ | : | 48 ಮಾಸಿಕ ಕಂತುಗಳು |

**6. ಕೃಷಿ ಸಂಪದ:**

ಹಿಂದುಳಿದ ವರ್ಗಗಳ ಸಣ್ಣ ರೈತರಿಗೆ ತರಕಾರಿ ಬೆಳೆಯಲು ಅಥವಾ ಇತರೆ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಸಣ್ಣ ಪ್ರಮಾಣದ ಬೆಳೆ ಸಾಲವನ್ನು ಮಂಜೂರು ಮಾಡಲಾಗುವುದು.

| | | |
|---|---|---|
| • ಗರಿಷ್ಟ ಸಾಲದ ಮೊತ್ತ | : | ಪ್ರತಿ ಫಲಾನುಭವಿಗೆ ರೂ.50,000/-ಗಳು |
| • ಬಡ್ಡಿ ದರ | : | ವಾರ್ಷಿಕ ಶೇ.4ರಷ್ಟು. |
| • ಮರುಪಾವತಿ ಅವಧಿ | : | 48 ತಿಂಗಳು (16 ತ್ರೈಮಾಸಿಕ). |
| • ವಾರ್ಷಿಕ ಆದಾಯದ ಮಿತಿ | : | ಗ್ರಾಮಾಂತರ ಪ್ರದೇಶದವರಿಗೆ ವಾರ್ಷಿಕ ರೂ.98,000/-ಗಳಿಗಿಂತ ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,20,000/-ಗಳಿಗಿಂತ ಕಡಿಮೆ ಇರಬೇಕು. |

**ಸಾಲದ ವಿವರ:**

| | | | |
|---|---|---|---|
| 1. | ರಾಷ್ಟ್ರೀಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | : | ಶೇ. 95ರಷ್ಟು . |
| 2. | ಫಲಾನುಭವಿ ವಂತಿಕೆ | : | ಶೇ. 5ರಷ್ಟು. |
| 3. | ಗರಿಷ್ಟ ಸಾಲದ ಮೊತ್ತ ಪ್ರತಿ ಫಲಾನುಭವಿಗೆ | : | ರೂ.50,000/- |

| | | |
|---|---|---|
| 4. ಬಡ್ಡಿ ದರ | : | ವಾರ್ಷಿಕ ಶೇ.4. |
| 5. ಮರುಪಾವತಿ ಅವಧಿ | : | 03 ತಿಂಗಳಿಗೊಮ್ಮೆ<br>48 ತಿಂಗಳು.<br>16 ತ್ರೈಮಾಸಿಕ |

**7. <u>ಶಿಲ್ಪ ಸಂಪದ</u>**

ಹಿಂದುಳಿದ ವರ್ಗಗಳ ಸಾಂಪ್ರದಾಯಿಕ ವೃತ್ತಿದಾರರಿಗೆ ತಮ್ಮ ವೃತ್ತಿ ಕೌಶಲ್ಯತೆ ಹೆಚ್ಚಿಸಲು ಅಗತ್ಯವಿರುವ with latest technological inputs ಮತ್ತು ಸಾಲದ ನೆರವು ಒದಗಿಸುವುದು.

| | | |
|---|---|---|
| • **ಗರಿಷ್ಟ ಸಾಲದ ಮೊತ್ತ** | : | ಪ್ರತಿ ಫಲಾನುಭವಿಗೆ ರೂ.10,00,000/-ಗಳು |
| • **ಬಡ್ಡಿ ದರ** | : | ರೂ.5.00ಲಕ್ಷದವರೆಗೆ ವಾರ್ಷಿಕ ಶೇ.6ರಷ್ಟು.<br>ರೂ.5.00 ರಿಂದ 10.00ಲಕ್ಷದ ವರೆಗೆ ವಾರ್ಷಿಕ ಶೇ.8ರಷ್ಟು |
| • **ಮರುಪಾವತಿ ಅವಧಿ** | : | ಗರಿಷ್ಠ 10 ವರ್ಷಗಳು. |
| • **ವಾರ್ಷಿಕ ಆದಾಯದ ಮಿತಿ** | : | ಗ್ರಾಮಾಂತರ ಪ್ರದೇಶದವರಿಗೆ ವಾರ್ಷಿಕ ರೂ.98,000/-ಗಳಿಗಿಂತ ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,20,000/-ಗಳಿಗಿಂತ ಕಡಿಮೆ ಇರಬೇಕು. |

**ಸಾಲದ ವಿವರ:**

| | | |
|---|---|---|
| 1. ರಾಷ್ಟ್ರೀಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | : | ಶೇ. 85ರಷ್ಟು . |
| 2. ಡಿ.ಬಿ.ಸಿ.ಡಿ.ಸಿ ಪಾಲಿನ ವಂತಿಕೆ | : | ಶೇ. 10ರಷ್ಟು. |
| 3. ಫಲಾನುಭವಿ ವಂತಿಕೆ | : | ಶೇ. 5ರಷ್ಟು. |

**8. <u>ಮಹಿಳಾ ಸಮೃದ್ಧಿ ಯೋಜನೆ:</u>**

**9.**

ಮಹಿಳೆಯರನ್ನು ಸಬಲೀಕರಣಗೊಳಿಸಲು ಮಹಿಳಾ ಸ್ವ ಸಹಾಯ ಗುಂಪುಗಳ ಮೂಲಕ ಮಹಿಳೆಯರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ, ಅಂದರೆ ಅಗರಬತ್ತಿ ತಯಾರಿಕೆಗೆ, ರೆಡಿಮೇಡ್ ಗಾರ್ಮೆಂಟ್ಸ್, ಡೈರಿ, ವ್ಯಾಪಾರ ಇತ್ಯಾದಿ ಎಲ್ಲಾ ವ್ಯಾಪಾರ ಚಟುವಟಿಕೆಗಳಿಗೆ ಸಾಲ ಮಂಜೂರು ಮಾಡಲಾಗುವುದು. ಪ್ರತಿ ಫಲಾನುಭವಿಗೆ ಗರಿಷ್ಟ ರೂ.50,000/-ಗಳಂತೆ ಒಂದು ಸ್ವ ಸಹಾಯ ಗುಂಪಿಗೆ ಗರಿಷ್ಠ ರೂ.3.50ಲಕ್ಷ ಗಳವರೆಗೆ ಶೇ. 4ರ ಬಡ್ಡಿ ದರದಲ್ಲಿ ಆರ್ಥಿಕ ನೆರವು ಒದಗಿಸುವುದು. ಅರ್ಜಿದಾರರು ಹಿಂದುಳಿದ ವರ್ಗಗಳಿಗೆ ಸೇರಿದ್ದು ಅವರ ವಾರ್ಷಿಕ ವರಮಾನವು ಗ್ರಾಮಾಂತರ ಪ್ರದೇಶದವರಿಗೆ ರೂ.98,000/-ಗಳು ಮತ್ತು ಪಟ್ಟಣ ಪ್ರದೇಶದವರಿಗೆ ರೂ.1,20,000/-ಗಳ ಮಿತಿಯಲ್ಲಿರುಬೇಕು.

**ಅವಧಿ ಸಾಲ ಯೋಜನೆಗೆ ಹಾಗೂ ಮಹಿಳಾ ಸಮೃದ್ಧಿ ಯೋಜನೆಯ ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ-...........ರಲ್ಲಿ ಪುಟ ಸಂಖ್ಯೆ: ............. ರಿಂದ ...........ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ-............ರಲ್ಲಿ ಪುಟ ಸಂಖ್ಯೆ: ............ರಲ್ಲಿ ಇರಿಸಿದೆ.**

## 2017–18ರ ಸಾಲಿಗೆ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಆರ್ಥಿಕ ನೆರವಿನೊಂದಿಗೆ ಅನುಷ್ಠಾನಗೊಳಿಸುವ ಯೋಜನಾವಾರು ಘಟಕ ವೆಚ್ಚ.

(ಲಕ್ಷ ರೂ.ಗಳಲ್ಲಿ)

| ಕಾರ್ಯಕ್ರಮ | ಗರಿಷ್ಠ ಘಟಕ ವೆಚ್ಚ | ಭೌತಿಕ ಗುರಿ | ಆರ್ಥಿಕ ಗುರಿ | | |
|---|---|---|---|---|---|
| | | | ನಿಗಮದ ಪಾಲಿನ ಮೊತ್ತ | ಎನ್.ಬಿ.ಸಿ ಪಾಲಿನ ಮೊತ್ತ ಅವಧಿ ಸಾಲ (85%) ಮೈಕ್ರೋ ಫೈನಾನ್ಸ್ (90%) ನ್ಯೂ ಸ್ವರ್ಣಿಮಾ/ಮಹಿಳಾ ಸಮೃದ್ಧಿ (95%) | ಒಟ್ಟು |
| **1** | **2** | **3** | **4** | **5** | **6** |
| **ಅವಧಿ ಸಾಲ ಯೋಜನೆಗಳು:** | | | | | |
| ಕೃಷಿ ಮತ್ತು ಕೃಷಿ ಅವಲಂಬಿತ ಚಟುವಟಿಕೆಗಳು.(6.67%) | **10.00** | 470 | 23.50 | 200.00 | 223.50 |
| ಸಣ್ಣ ವ್ಯಾಪಾರ(6.67%) | | 470 | 23.50 | 200.00 | 223.50 |
| ಸೇವಾ ವಲಯ(2.00%) | | 235 | 7.05 | 60.00 | 67.05 |
| ಸಾರಿಗೆ ವಲಯ(6.67) | | **117** | 23.40 | 200.00 | 223.40 |
| **ಶೈಕ್ಷಣಿಕ ಸಾಲ ಯೋಜನೆ** ಅ) ಭಾರತದಲ್ಲಿ(1.67%) | 2.50 ಪ್ರತಿ ವರ್ಷಕ್ಕೆ | 23 | 5.75 | 50.00 | 55.75 |
| ಆ) ವಿದೇಶದಲ್ಲಿ(1.13%) | 10.00 | 04 | 4.00 | 34.00 | 38.00 |
| ನ್ಯೂ ಸ್ವರ್ಣಿಮಾ ಯೋಜನೆ (5.50%) | 1.00 | 579 | 8.70 | 165.00 | 173.70 |
| ಶಿಲ್ಪ ಸಂಪದ (0.33%) | 10.00 | 24 | 1.40 | 10.00 | 11.40 |
| ಸ್ವಯಂ ಸಕ್ಷಮ(0.66%) | 10.00 | 24 | 2.80 | 20.00 | 22.80 |
| ಮೈಕ್ರೋ ಫೈನಾನ್ಸ್ (17.87%) | 0.50 | 1702 | 30.00 | 536.00 | 566.00 |
| ಕೃಷಿ ಸಂಪದ(0.83%) | 0.50 | 59 | 2.95 | 25.00 | 27.95 |
| **ಒಟ್ಟು** | | **3707** | **133.05** | **1495.00** | 1633.05 |
| ಮಹಿಳಾ ಸಮೃದ್ಧಿ(50%) | 1.00 | 4513 | 79.55 | 1500.00 | 1579.55 |
| **ಎನ್.ಬಿ.ಸಿ. ಒಟ್ಟು** | | **8220** | **212.60** | **3000.00** | **3212.60** |

## ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಅವಧಿ ಸಾಲಗಳಿಗೆ ವಿಧಿಸುವ ಬಡ್ಡಿದರ ಮತ್ತು ಮರುಪಾವತಿ ಕಂತುಗಳು:

| ಕ್ರ ಸಂ | ಯೋಜನೆಯ ಹೆಸರು | ವಿಧಿಸುವ ವಾರ್ಷಿಕ ಬಡ್ಡಿ | | ಮರುಪಾವತಿ ಕಂತುಗಳ ಸಂಖ್ಯೆ |
|---|---|---|---|---|
| | | ರೂ.5.00 ಲಕ್ಷಗಳ ವರೆಗೆ | ರೂ.5.00 ಲಕ್ಷಗಳ ಮೇಲ್ಪಟ್ಟು | |
| 1 | ವ್ಯವಸಾಯ ಮತ್ತು ವ್ಯವಸಾಯಾಧಾರಿತ ಯೋಜನೆಗಳು (ಹೈನುಗಾರಿಕೆ, ಮೀನುಗಾರಿಕೆ ಇತ್ಯಾದಿ ಕೃಷಿ ಅವಲಂಬಿತ ಚಟುವಟಿಕೆಗಳಿಗೆ) | 6% | 8% | 34 ತಿಂಗಳು |
| 2 | ಸಣ್ಣ ವ್ಯಾಪಾರ | 6% | 8% | 45 ತಿಂಗಳು |

| | | | | |
|---|---|---|---|---|
| 3 | ಸೇವಾ ವಲಯ/ಕುಶಲಕರ್ಮಿ | 6% | 8% | 34 ತಿಂಗಳು |
| 4 | ಸಾರಿಗೆ ವಲಯ(ಆಟೋರಿಕ್ಷಾ, ಗೂಡ್ಸ್ ಆಟೋರಿಕ್ಷಾ) | 6% | 8% | 58 ತಿಂಗಳು |
| 5 | ನ್ಯೂ ಸ್ವರ್ಣಿಮಾ ಯೋಜನೆ | 5% | – | 34–60 ತಿಂಗಳು |
| 6 | ಶೈಕ್ಷಣಿಕ ಸಾಲ ಯೋಜನೆ | 4% | 8% | 34–60 ತಿಂಗಳು |
| 7 | ಸಕ್ಷಮ ಯೋಜನೆ | 6% | 8% | 34–108 ತಿಂಗಳು |
| 8 | ಮೈಕ್ರೋ ಫೈನಾನ್ಸ್ | 5% | – | 34–48 ತಿಂಗಳು |
| 9 | ಶಿಲ್ಪ ಸಂಪದ | 6% | 8% | 34–108 ತಿಂಗಳು |
| 10 | ಕೃಷಿ ಸಂಪದ | 4% | – | 34–48 ತಿಂಗಳು |
| 11 | ಮಹಿಳಾ ಸಮೃದ್ಧಿ ಯೋಜನೆ | 4% | – | 34–48 ತಿಂಗಳು |

## III. ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ಮಂಡಳಿ ಒದಗಿಸಿದ ಮೊತ್ತದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು:

### 1. ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಸ್ವಯಂ ಉದ್ಯೋಗ ಸಾಲ ಯೋಜನೆ:

- ಸರ್ಕಾರದ ಆದೇಶ ಸಂಖ್ಯೆ: ಪಿ.ಹೆಚ್.ಎಸ್ 262 ಎಸ್.ಇ.ಡಬ್ಲ್ಯೂ 65, ದಿನಾಂಕ: 01/02/1966ರನ್ವಯ ಅಲೆಮಾರಿ/ಅರೆ ಅಲೆಮಾರಿ ಜನಾಂಗಕ್ಕೆ ಸೇರಿದ **1) ಬೈರಾಗಿ (ಬಾವ), 2) ಬಾಲ ಸಂತೋಷಿ–ಜೋಷಿ, 3) ಬಾಜಿಗರ್, 4)ಭರಡಿ, 5)ಬುಡಬುಡಕಿ–ಜೋಶಿ–ಗೋಂಧಳಿ, 6)ಚಾರ, 7)ಚಿತ್ರಕಥಿ–ಜೋಷಿ, 8)ಧೋಲಿ, 9)ಧವೇರಿ, 10)ದೊಂಬರಿ, 11)ಘಿಸಾಡಿ, 12)ಗರುಡಿ, 13)ಗೋಪಾಲ್, 14)ಗೊಂದಳಿ, 15)ಹೆಳವ, 16)ಜೋಗಿ, 17)ಕೇಲ್ಕರಿ, 18)ಕೋಲ್ಹಟಿ, 19)ನಂದಿವಾಲ–ಜೋಷಿ–ಗೊಂದಳಿ, ಪುಲ್‌ಮಾಲ್ಲಿ, 20)ನಾಥಪಂಥಿ–ಡೌರಿ–ಗೋಸಾವಿ 21)ನಿರ್ಶಿಕಾರಿ, 22)ಪಾಂಗ್ಯುಯಲ್, 23)ಜೋಷಿ (ಸಾದ ಜೋಷಿ), 24)ಸಾನ್ಸಿಯ, 25)ಸರಾನಿಯ, 26)ತಿರುಮಲಿ, 27)ವಾಯ್ದು 28)ವಾಸುದೇವ್, 29)ವಾಡಿ, 30)ವಾಗ್ರಿ, 31)ವಿರ್, 32)ಬಜನಿಯ, 33)ಶಿಕ್ಕಲಿಗರ್, 34)ಗೊಲ್ಲ, 35)ಕಿಲ್ಲಿಕ್ಯಾತಸ್, 36)ಸರೋಡಿ, 37)ದುರ್ಗ–ಮುರ್ಗ (ಬುರ್‌ಬುರ್‌ಚ), 38)ಹಾವಗಾರ್ (ಹಾವಾಡಿಗಾರ್), 39)ಪಿಚಗುಂಟಲ, 40)ಮಸಣಿಯ ಯೋಗಿ, 40)(ಬೆಸ್ತರ್)ಬುಂಡಬೆಸ್ತ, 42)ಕಟಬು, 43)ದರ್ವೆಶ್, 44)ಕಾಶಿ ಕಪಾಡಿ, 45)ದೊಂಬಿದಾಸ ಮತ್ತು 46)ಬೈಲ್‌ಪತರ್** ಜನಾಂಗಕ್ಕೆ ಸೇರಿದವರಿಗೆ ಸ್ವಯಂ ಉದ್ಯೋಗಕ್ಕೆ ಅವರು ಕೈಗೊಳ್ಳುವ ಆರ್ಥಿಕ ಚಟುವಟಿಕೆ ಅನುಸಾರ ರೂ.2,00,000/–ಗಳವರೆಗೆ ಈ ಕೆಳಕಂಡಂತೆ ಸೌಲಭ್ಯ ಒದಗಿಸಲಾಗುವುದು.
- **ಘಟಕ ವೆಚ್ಚ** ರೂ.50,000/–ಗಳಿಗೆ ಶೇ.30ರಷ್ಟು ಗರಿಷ್ಠ ರೂ.10,000/–ಗಳ ಸಹಾಯಧನ ಉಳಿಕೆ ಶೇ.70ರಷ್ಟು ರೂ.40,000/–ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.
- **ಘಟಕ ವೆಚ್ಚ** ರೂ.50,001/–ರಿಂದ ರೂ.1,00,000/–ಗಳವರೆಗೆ ಶೇ.20ರಷ್ಟು ಗರಿಷ್ಠ ರೂ.20.000/–ಗಳ ಸಹಾಯಧನ ಉಳಿಕೆ ಶೇ.80ರಷ್ಟು ರೂ.80,000/–ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.
- ಘಟಕ ವೆಚ್ಚ ರೂ.1,00,001/–ರಿಂದ ರೂ.2,00,000/–ಗಳವರೆಗೆ ಶೇ.15ರಷ್ಟು ಕನಿಷ್ಠ ರೂ.20,000/–ಗಳ ಗರಿಷ್ಠ ರೂ.30,000/–ಗಳ ಸಹಾಯಧನ ಉಳಿಕೆ ಶೇ.85ರಷ್ಟು ರೂ.1.70.000/–ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.

**ಜಿಲ್ಲಾವಾರು ಗುರಿಯನ್ನು ಅನುಬಂಧ–...........ರಲ್ಲಿ ಪುಟ ಸಂಖ್ಯೆ: ...............ರಲ್ಲಿ ಇರಿಸಿದೆ.**

2. **ಮಹಿಳಾ ಸ್ವ ಸಹಾಯ ಗುಂಪುಗಳಿಗೆ ಆರ್ಥಿಕ ನೆರವು ಯೋಜನೆ:** ಅಲೆಮಾರಿ/ಅರೆ ಅಲೆಮಾರಿ ಜನಾಂಗಕ್ಕೆ ಸೇರಿದ ಮಹಿಳೆಯರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ತಲಾ ರೂ.35000/–ಗಳ ವರೆಗಿನ ಶೇ.30ರಷ್ಟು ಗರಿಷ್ಠ ರೂ.10000/–ಗಳ ಸಹಾಯಧನ ಉಳಿಕೆ ಶೇ.70ರಷ್ಟು ರೂ.25000/–ಗಳು ವಾರ್ಷಿಕ 4ರ ಬಡ್ಡಿದರದಲ್ಲಿ ಸಾಲ. ಪ್ರತಿ ಮಹಿಳಾ ಸ್ವ ಸಹಾಯ ಗುಂಪಿಗೆ ಗರಿಷ್ಠ ರೂ.3.50ಲಕ್ಷಗಳ ಸೌಲಭ್ಯ ಒದಗಿಸಲಾಗುವುದು.

**ಜಿಲ್ಲಾವಾರು ಗುರಿಯನ್ನು ಅನುಬಂಧ–...........ರಲ್ಲಿ ಪುಟ ಸಂಖ್ಯೆ: ...............ರಲ್ಲಿ ಇರಿಸಿದೆ.**

3. **ಅಲೆಮಾರಿ/ಅರೆ ಅಲೆಮಾರಿ ಅರಿವು–ಶೈಕ್ಷಣಿಕ ಸಾಲ ಯೋಜನೆ ಸಾಲ ಯೋಜನೆ:** ಅಲೆಮಾರಿ/ಅರೆ ಅಲೆಮಾರಿ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಲು ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ವಾರ್ಷಿಕ ಗರಿಷ್ಠ ರೂ.1.00ಲಕ್ಷಗಳ ವರೆಗೆ ಆರ್ಥಿಕ ನೆರವು ಒದಗಿಸಲಾಗುವುದು. ಅರಿವು–ಶೈಕ್ಷಣಿಕ ಸಾಲ ಯೋಜನೆಯಲ್ಲಿ ಗುರುತಿಸಿರುವ 28 ಕೋರ್ಸ್‌ಗಳು ಹಾಗೂ (1) ಡಿಪ್ಲೊಮೊ, (2) ಐ.ಟಿ.ಐ., (3) ನರ್ಸಿಂಗ್, (4) ಬಿ.ಎ., (5) ಬಿ.ಎಸ್.ಸಿ., (6) ಎಂ.ಎ., (7) ಎಂ.ಎಸ್.ಸಿ., (8) ಡಿ.ಇ.ಡಿ., (9) ಬಿ.ಎಡ್., ಹಾಗೂ ಸಾಮಾನ್ಯ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ಒದಗಿಸಲಾಗುವುದು. ಈ ಯೋಜನೆಯಲ್ಲಿ ಸೌಲಭ್ಯ ಪಡೆಯಲು ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ.6.00ಲಕ್ಷಗಳು.

**ಜಿಲ್ಲಾವಾರು ಗುರಿಯನ್ನು ಅನುಬಂಧ–.............ರಲ್ಲಿ ಪುಟ ಸಂಖ್ಯೆ: ...................ರಲ್ಲಿ ಇರಿಸಿದೆ.**

4. **ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿ/ಸರಕು ಸಾಗಾಣಿಕೆ ವಾಹನ ಕೊಳ್ಳಲು ಸಹಾಯಧನ:** ವಾಹನ ಚಾಲನಾ ಪರವಾನಗಿಯನ್ನು ಹೊಂದಿರುವ ಅಲೆಮಾರಿ/ಅರೆ ಅಲೆಮಾರಿ ಜನಾಂಗಕ್ಕೆ ಸೇರಿದ 62 ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿ/ಸರಕು ಸಾಗಾಣಿಕೆ ವಾಹನಗಳನ್ನು ಖರೀದಿಸಲು ರೂ.3.00ಲಕ್ಷಗಳ ವರೆಗೆ ಅಥವಾ ವಾಹನದ ಶೇ.50ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಹಾಯಧನ ನೀಡಲಾಗುವುದು. ಉಳಿದ ಮೊತ್ತವನ್ನು ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಪಡೆಯವುದು.

**ಜಿಲ್ಲಾವಾರು ಗುರಿಯನ್ನು ಅನುಬಂಧ–...........ರಲ್ಲಿ ಪುಟ ಸಂಖ್ಯೆ: ...............ರಲ್ಲಿ ಇರಿಸಿದೆ.**

5. **ಅಲೆಮಾರಿ/ಅರೆ ಅಲೆಮಾರಿ ಗಂಗಾ ಕಲ್ಯಾಣ ನೀರಾವರಿ ಸೌಲಭ್ಯ:** ಅಲೆಮಾರಿ/ಅರೆ ಅಲೆಮಾರಿ ಸಮುದಾಯಗಳಿಗೆ ಸೇರಿದ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ವೈಯಕ್ತಿಕ/ಸಾಮೂಹಿಕ ನೀರಾವರಿ ಯೋಜನೆಯ ಘಟಕ ವೆಚ್ಚಗಳಲ್ಲಿ ನೀರಾವರಿ ಸೌಲಭ್ಯ ಒದಗಿಸಲಾಗುವುದು.

**ಜಿಲ್ಲಾವಾರು ಗುರಿಯನ್ನು ಅನುಬಂಧ–..............ರಲ್ಲಿ ಪುಟ ಸಂಖ್ಯೆ: ..............ರಲ್ಲಿ ಇರಿಸಿದೆ.**

6. **ಅಲೆಮಾರಿ/ಅರೆ ಅಲೆಮಾರಿ ಭೂ ಖರೀದಿ ಯೋಜನೆ:** ಅಲೆಮಾರಿ/ಅರೆ ಅಲೆಮಾರಿ ಜನಾಂಗಕ್ಕೆ ಸೇರಿದ ಕನಿಷ್ಠ 1 ಎಕರೆ ತರಿ ಭೂಮಿ ಅಥವಾ 2 ಎಕರೆ ಖುಷ್ಕಿ ಜಮೀನನ್ನು ಕೊಂಡುಕೊಳ್ಳಲು ಸಾಲ ಮತ್ತು ಸಹಾಯಧನ ಒದಗಿಸಲಾಗುವುದು. ಘಟಕ ವೆಚ್ಚ ರೂ.10.00ಲಕ್ಷಗಳನ್ನು ನಿಗದಿಪಡಿಸಿದೆ. ಈ ಮೊತ್ತದಲ್ಲಿ ಶೇ.50ರಷ್ಟು ಸಹಾಯಧನ ಹಾಗೂ ಉಳಿಕೆ ಶೇ.50ರಷ್ಟು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ ಮಂಜೂರು ಮಾಡಲಾಗುವುದು.

**IV. ಕಳೆದ ಸಾಲುಗಳ ಉಳಿಕೆ ಮೊತ್ತದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು:**

ಮಡಿವಾಳ ಸಮಾಜದವರಿಗೆ ಅನುಷ್ಠಾನಗೊಳಿಸುತ್ತಿರುವ ದೋಬಿಘಾಟ್ ಅಭಿವೃದ್ಧಿ ಯೋಜನೆಯಡಿ ಕಳೆದ ಸಾಲುಗಳಲ್ಲಿ ವೆಚ್ಚವಾಗದೆ ಉಳಿಕೆಯಾದ ರೂ.150.00ಲಕ್ಷಗಳಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. **ಮಡಿವಾಳ ಸಮಾಜದ ಅಭಿವೃದ್ಧಿ ಯೋಜನೆಗಳು**:

A. ವಾಹನ ಚಾಲನ ಪರವಾನಗಿ ಹೊಂದಿರುವ ಮಡಿವಾಳ ಸಮಾಜ ನಿರುದ್ಯೋಗಿ ಯುವಕರಿಗೆ ಬ್ಯಾಂಕುಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿರುವ ಚೈತನ್ಯ ಸಬ್ಸಿಡಿ ಕಂ ಸಾಫ್ಟ್‌ಲೋನ್ ಯೋಜನೆಯಲ್ಲಿ ವಾಹನ ಕೊಡಿಸಲು ನಿಗಮದಿಂದ ಗರಿಷ್ಠ ರೂ.1.00ಲಕ್ಷಗಳ ಮಾರ್ಜಿನ್ ಹಣ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಹಾಗೂ ಉಳಿಕೆ ಮೊತ್ತ ಬ್ಯಾಂಕ್‌ಪಾಲಿನ ಮೊತ್ತವಾಗಿರುತ್ತದೆ.

B. ಬಿ.ಬಿ.ಎಂ.ಪಿ., ಕರ್ನಾಟಕ ಕೊಳಗೇರಿ ಅಭಿವೃದ್ಧಿ ಹಾಗೂ ಇತರೆ ಸರ್ಕಾರಿ ಸಂಸ್ಥೆಗಳು ನೀಡುವ 10" 10" ಅಡಿ ಸ್ಥಳಾವಕಾಶದಲ್ಲಿ ಲಾಂಡ್ರಿ ಘಟಕ ಸ್ಥಾಪಿಸಲು ಸರ್ಕಾರದ ಆದೇಶ: ಹಿಂವಕ 494 ಬಿ.ಎಂ.ಎಸ್ 2015, ದಿನಾಂಕ:04/12/2015ರ ಆದೇಶದ ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆಯಡಿ ನಿಗದಿಪಡಿಸಿದ ಘಟಕ ವೆಚ್ಚದಂತೆ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸೌಲಭ್ಯ ಒದಗಿಸುವುದು.

**ನಿಗಮದ ಯೋಜನೆಗಳಡಿ ಸೌಲಭ್ಯ ಒದಗಿಸಲು ಸಾಲದ ಉದ್ದೇಶ ಅಥವಾ ಚಟುವಟಿಕೆಗಳಿಗೆ ನಿಗದಿಪಡಿಸಿದ ಕನಿಷ್ಟ ಘಟಕ ವೆಚ್ಚ**

| ಕ್ರ. ಸಂ | ಉದ್ದೇಶಗಳು/ಆರ್ಥಿಕ ಚಟುವಟಿಕೆಗಳು | ನಿಗಧಿಪಡಿಸಿದ ಕನಿಷ್ಟ ಘಟಕ ವೆಚ್ಚ |
|---|---|---|
| **1** | **2** | **3** |
| 1 | ಹೈನುಗಾರಿಕೆ | 50,000 |
| 2 | ಕುರಿ ಸಾಕಾಣಿಕೆ | 50,000 |
| 3 | ಮೇಕೆ ಸಾಕಾಣಿಕೆ | 50,000 |
| 4 | ಬಟ್ಟೆ ವ್ಯಾಪಾರ | 35,000 |
| 5 | ಟೈಲರಿಂಗ್ | 25,000 |
| 6 | ಕಿರಾಣಿ, ದಿನಸಿ, ಪ್ರಾವಿಜನ್ ಸ್ಟೋರ್, ಪಾನ್ ಶಾಪ್, ಜನರಲ್ ಸ್ಟೋರ್, ಕಾಳುಕಡಿ ವ್ಯಾಪಾರ, ಪೆಟ್ಟಿ ಶಾಪ್ | 50,000 |
| 7 | ಸೆಲೂನ್/ಬ್ಯೂಟಿಪಾರ್ಲರ್ | 25,000 |
| 8 | ಲ್ಯಾಂಡ್ರಿ / ಡ್ರೈಕ್ಲೀನರ್ | 25,000 |
| 9 | ತರಕಾರಿ, ಹೂವು ಹಣ್ಣು ವ್ಯಾಪಾರ, ತೆಂಗಿನ ಕಾಯಿ ವ್ಯಾಪಾರ. | 25,000 |
| 10 | ನೇಕಾರಿಕೆ/ಕಂಬಳಿ ನೇಯ್ಗೆ/ಚಾಪೆ ನೇಯ್ಗೆ/ಕುಷನ್ ವರ್ಕ್ಸ್ | 25,000 |

| ಕ್ರ. ಸಂ | ಉದ್ದೇಶಗಳು/ಆರ್ಥಿಕ ಚಟುವಟಿಕೆಗಳು | ನಿಗಧಿಪಡಿಸಿದ ಕನಿಷ್ಟ ಘಟಕ ವೆಚ್ಚ |
|---|---|---|
| 11 | ಹೋಟೆಲ್/ಟೀ ಸ್ಟಾಲ್/ಬೇಕರಿ/ ಕ್ಯಾಂಟರಿಂಗ್/ಕಾಂಡಿಮೆಂಟ್ಸ್/ ಹಾಲು ಮಾರಾಟ/ಚಿಪ್ಸ್ ವ್ಯಾಪಾರ/ ಪಾನಿಪೂರಿ ಅಂಗಡಿ | 25,000 |
| 12 | ಕೋಳಿ ಸಾಕಾಣಿಕೆ/ಮೊಲ ಸಾಕಾಣಿಕೆ/ಮೀನು ಸಾಕಾಣಿಕೆ/ಮೊಟ್ಟೆ ವ್ಯಾಪಾರ | 25,000 |
| 13 | ಬಳೆ ವ್ಯಾಪಾರ/ಫ್ಯಾನ್ಸಿ ಸ್ಟೋರ್/ ಗೊಂಬೆ ವ್ಯಾಪಾರ/ ಸ್ಟೇಷನರಿ ವ್ಯಾಪಾರ | 25,000 |
| 14 | ವೆಲ್ಡಿಂಗ್ ವರ್ಕ್ಸ್/ಎಲೆಕ್ಟ್ರೀಕಲ್ ಶಾಪ್/ ಆಟೋಮೊಬೈಲ್/ಇಂಜಿನಿಯರಿಂಗ್ ವರ್ಕ್ಸ್/ಗ್ಯಾರೇಜ್ ವರ್ಕ್ಸ್/ ಮಿಷನರಿ ವರ್ಕ್ಸ್/ಮೆಟಲ್ ಕ್ರಾಫ್ಟ್ ವರ್ಕ್/ ಫೈಬರ್ ವರ್ಕ್ಸ್/ಗುಜರಿ ವ್ಯಾಪಾರ | 50,000 |
| 15 | ಗಾಣದ ಕೆಲಸ/ಎಣ್ಣೆ ತಯಾರಿಕೆ/ ಹಿಟ್ಟಿನ ಗಿರಣಿ/ | 50,000 |
| 16 | ಸಿಲ್ಕ್ ರೀಲಿಂಗ್/ಸಿಲ್ಕ್ ಟ್ವಿಸ್ಟಿಂಗ್/ ರೇಷ್ಮೆ ಹುರಿ ಮಿಷನ್/ನೂಲಿನ ವ್ಯಾಪಾರ/ಕೈಮಗ್ಗ/ನಾರಿನ ಹಗ್ಗ ತಯಾರಿಕೆ/ ನಿಟ್ಟಿಂಗ್ ಕೆಲಸ | 50,000 |
| 17 | ಸಣ್ಣ ವ್ಯಾಪಾರ/ಸೀರೆ ವ್ಯಾಪಾರ | 25,000 |
| 18 | ಕ್ಲಿನಿಕ್/ಔಷದಿ ಅಂಗಡಿ/ಪೋಟೋ ಸ್ಟುಡಿಯೋ/ಡಿ.ಟಿ.ಪಿ ಸೆಂಟರ್/ಸೈಬರ್ ಸೆಂಟರ್/ಜೆರಾಕ್ಸ್ ಅಂಗಡಿ/ ಕೇಬಲ್ ಕಂಟ್ರೋಲ್/ಹಾರ್ಡ್‌ವೇರ್ ಅಂಗಡಿ | 50,000 |

**ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ಸೌಲಭ್ಯ ಪಡೆಯಲು ಆಯಾ ಯೋಜನೆಗನುಸಾರವಾಗಿ ಸಲ್ಲಿಸಬೇಕಾದ ದಾಖಲಾತಿಗಳು.**

**i.** ಸಾಲ ಮಂಜೂರಾತಿ ಪೂರ್ವ ಸಲ್ಲಿಸಬೇಕಾದ ದಾಖಲೆಗಳು:

1. ಆಯಾ ಯೋಜನೆಗೆ ನಿಗದಿ ಪಡಿಸಿದ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿ ನಮೂನೆ.
2. ಜಾತಿ ಮತ್ತು ಆದಾಯ ಪ್ರಮಾಣ ಪತ್ರ. (5 ವರ್ಷಗಳ ಅವಧಿ ಒಳಗಿರಬೇಕು, ನಕಲು ಪ್ರತಿ ಲಗತ್ತಿಸಬೇಕು ಹಾಗೂ ಸೂಚಿಸಿದಾಗ ಮೂಲ ಪ್ರತಿ ಹಾಜರು ಪಡಿಸಬೇಕು.)
3. ವಿಳಾಸ ದೃಢೀಕರಣಕ್ಕೆ ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ/ಕೆ.ಪಿ.ಟಿ.ಸಿ.ಎಲ್. ಆರ್.ಆರ್. ನಂ. ಇರುವ ಬಿಲ್ಲಿನ ಜೆರಾಕ್ಸ್ ಪ್ರತಿ/ಆಧಾರ ಕಾರ್ಡ್‌ನ ಜೆರಾಕ್ಸ್ ಪ್ರತಿ.

4. ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳು.
5. ಘಟಕಗಳಿಗೆ ಅಗತ್ಯವಿದ್ದಲ್ಲಿ ಗ್ರಾಮ ಪಂಚಾಯಿತಿ/ಪಟ್ಟಣ ಪಂಚಾಯಿತಿಗಳಿಂದ ಲೈಸೆನ್ಸ್/ ಪರವಾನಗಿ ಪತ್ರ.
6. ಸಾರಿಗೆ ವಲಯದಲ್ಲಿ ಸಾಲ ಪಡೆಯಲು ಡ್ರೈವಿಂಗ್ ಲೈಸೆನ್ಸ್.(ಜೆರಾಕ್ಸ್ ಪ್ರತಿ)
7. ರೂ.1,00,000/–ಗಳಿಗಿಂತ ಹೆಚ್ಚಿನ ಸಾಲದ ಭದ್ರತೆಗೆ ನಿಗಮಕ್ಕೆ ಸ್ಥಿರಾಸ್ತಿಯನ್ನು ಆಧಾರ ಮಾಡಬೇಕು. ಅರ್ಜಿದಾರರು ಅಥವಾ ಜಾಮೀನುದಾರರು ಹೊಂದಿರುವ ಸ್ಥಿರಾಸ್ತಿಯ ದಾಖಲಾತಿಗಳಾದ, ಮೂಲ ಕ್ರಯ ಪತ್ರ, 3 ವರ್ಷಗಳ ಪಹಣಿ, ಖಾತ ಉದ್ಧರಣೆ, 13 ವರ್ಷಗಳ ಋಣಭಾರ ರಾಹಿತ್ಯ ಪ್ರಮಾಣ ಪತ್ರ, ಸ್ಥಿರಾಸ್ತಿ ಮೌಲ್ಯ ನಿರ್ಣಯ ಪತ್ರ, ಕಂದಾಯ ಪಾವತಿ ರಶೀದಿ ಇತ್ಯಾಧಿ.
8. ರಾಷ್ಟ್ರೀಕೃತ/ಶೆಡ್ಯೂಲ್/ಗ್ರಾಮೀಣ ಬ್ಯಾಂಕ್‌ನಲ್ಲಿ ಫಲಾನುಭವಿಯು ಹೊಂದಿರುವ ಬ್ಯಾಂಕ್ ಖಾತಾ ಸಂಖ್ಯೆ, ಐ.ಎಫ್.ಎಸ್.ಸಿ. ಕೋಡ್ ಹೊಂದಿದ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ.
9. ಶೈಕ್ಷಣಿಕ ಸಾಲ ಯೋಜನೆಗೆ ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿರುವ ಕಾಲೇಜಿನ ವ್ಯಾಸಂಗದ ದೃಢೀಕರಣ ಪತ್ರ.
10. ವಿದ್ಯಾರ್ಥಿ ಮೆರಿಟ್ ಆಧಾರದ ಮೇಲೆ ಸೀಟು ಪಡೆದಿರುವ ಬಗ್ಗೆ ಸಿ.ಇ.ಟಿ.ಯವರು ನೀಡಿರುವ ಸೀಟು ಹಂಚಿಕೆ ಪತ್ರ.
11. ಗಂಗಾಕಲ್ಯಾಣ ಯೋಜನೆಯಲ್ಲಿ ನೀರಾವರಿ ಸೌಲಭ್ಯ ಪಡೆಯಲು ಅರ್ಜಿದಾರರು ಸಣ್ಣ ಮತ್ತು ಅತಿಸಣ್ಣ ರೈತರಾಗಿರಬೇಕು. ಈ ಬಗ್ಗೆ ಸಂಬಂಧಿಸಿದ ತಹಶಿಲ್ದಾರ್/ಕಂದಾಯ ಅಧಿಕಾರಿಗಳಿಂದ ಪಡೆದ ದೃಢೀಕೃತ ಪ್ರಮಾಣ ಪತ್ರ.
12. ಗಂಗಾಕಲ್ಯಾಣ ಯೋಜನೆಯಲ್ಲಿ ಏತನೀರಾವರಿ ಯೋಜನೆಗೆ ಭೂಮಟ್ಟದಲ್ಲಿ ದೊರೆಯುವ ನೀರಿನ್ನು ಬಳಸಿಕೊಳ್ಳಲು ಸಂಬಂಧಿಸಿದ ನೀರಾವರಿ ಇಲಾಖೆಯಿಂದ ಅನುಮತಿ ಪತ್ರ.

ii. **ಸಾಲ ಮಂಜೂರಾದ ನಂತರ ಸಲ್ಲಿಸಬೇಕಾದ ದಾಖಲೆಗಳು/ಭದ್ರತಾ ದಾಖಲೆಗಳು:**

1. ಸಾಲ ಮಂಜೂರಾತಿ ಆದೇಶದಲ್ಲಿ ತಿಳಿಸಿರುವಂತೆ ಸಾಲದ ಭದ್ರತಾ ದಾಖಲೆಗಳು. (ಪ್ರಾನೋಟ್, ಲೆಟರ್ ಆಫ್ ರಿಪೆಮೆಂಟ್, ಲೆಟರ್ ಆಫ್ ಗ್ಯಾರಂಟಿ, ಹೈಪಾಥಿಕೇಶನ್ ಡೀಡ್ ಇತ್ಯಾಧಿ)
2. ಅರ್ಜಿದಾರರು ಮತ್ತು ಜಾಮೀನುದಾರರ ಆಸ್ತಿ ಮತ್ತು ಋಣಭಾರಗಳ ಘೋಷಣೆ.
3. ಬೇಬಾಕಿ ಪತ್ರ.
4. ರೂ.1.00ಲಕ್ಷಗಳಿಗಿಂತ ಹೆಚ್ಚಿನ ಸಾಲಕ್ಕೆ ಅರ್ಜಿದಾರರು/ಜಾಮೀನುದಾರರು ನೀಡುವ ಸ್ಥಿರಾಸ್ತಿಯ ಕಂದಾಯ ದಾಖಲೆಗಳು.

## ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆ ಮತ್ತು ಮಂಜೂರಾತಿ ವಿಧಾನ

ಸರ್ಕಾರದ ಆದೇಶ ಸಂಖ್ಯೆ: ಸಕಇ 162 ಎಸ್.ಡಿ.ಸಿ. 2015, ದಿನಾಂಕ: 04/07/2016ರ, ಆದೇಶದನ್ವಯ ನಿಗಮವು ಅನುಷ್ಠಾನಗೊಳಿಸುತ್ತಿರುವ ಸಾಲದ ಯೋಜನೆಗಳ ಮತ್ತು ಗಂಗಾಕಲ್ಯಾಣ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ.

| | | |
|---|---|---|
| 1 | ವಿಧಾನ ಸಭಾ ಕ್ಷೇತ್ರ ಶಾಸಕರು | ಅಧ್ಯಕ್ಷರು. |
| 2 | ಆಯಾ ಲೋಕಸಭಾ ಕ್ಷೇತ್ರದ ಸದಸ್ಯರು | ಸದಸ್ಯರು. |
| 3 | ಆಯಾ ರಾಜ್ಯಸಭಾ ಕ್ಷೇತ್ರದಲ್ಲಿ ಖಾಯಂ ಆಗಿ ವಾಸಿಸುವಂತಹ ರಾಜ್ಯ ಸಭಾ ಸದಸ್ಯರು | ಸದಸ್ಯರು. |
| 4 | ತಾಲ್ಲೂಕಿನಲ್ಲಿ ಖಾಯಂ ಆಗಿ ವಾಸಿಸುತ್ತಿರುವ ವಿಧಾನ ಪರಿಷತ್ತಿನ ಸದಸ್ಯರು. | ಉಪಾಧ್ಯಕ್ಷರು |
| 5 | ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ | ಸದಸ್ಯರು. |
| 6 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ | ಸದಸ್ಯರು. |
| 7 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ | ಸದಸ್ಯರು. |
| 8 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ) | ಸದಸ್ಯರು. |
| 9 | ತಾಲ್ಲೂಕು ಸಹಾಯಕ ನಿರ್ದೇಶಕರು, ಕೈಗಾರಿಕಾ ಇಲಾಖೆ. | ಸದಸ್ಯರು. |
| 10 | ಸಂಬಂಧಿಸಿದ ತಾಲ್ಲೂಕು ತಹಶೀಲ್ದಾರರು | ಸದಸ್ಯರು. |
| 11 | ತಾಲ್ಲೂಕಿನ ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು. |
| 12 | ತಾಲ್ಲೂಕಿನ ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು. |
| 13 | ಸಂಬಂಧಿಸಿದ ಜಿಲ್ಲೆಯ ಅರಣ್ಯಾಧಿಕಾರಿ | ಸದಸ್ಯರು. |
| 14 | ಹಿಂದುಳಿದ ವರ್ಗಗಳ ಇಲಾಖೆಯ ನಿರೀಕ್ಷಕರು. | ಸದಸ್ಯರು. |
| 15 | ಕರ್ನಾಟಕ ಪರಿಶಿಷ್ಟ ಜಾತಿ/ವರ್ಗಗಳ ಅಭಿವೃದ್ಧಿ ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಭಿವೃದ್ದಿ ಅಧಿಕಾರಿ/ಅಭಿವೃದ್ಧಿ ಸಹಾಯಕರು (ಆಯಾ ನಿಗಮಕ್ಕೆ ಸಂಬಂಧಿಸಿದವರು) | ಸದಸ್ಯ ಕಾರ್ಯದರ್ಶಿಗಳು |

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್, ಅರಿವು–ಶೈಕ್ಷಣಿಕ ಸಾಲ ಯೋಜನೆ ಮತ್ತು ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡಲು **ಸರ್ಕಾರದ ಆದೇಶ ಸಂಖ್ಯೆ: ಹಿಂವಕ 31 ಸಮನ್ವಯ 2013, ಬೆಂಗಳೂರು, ದಿನಾಂಕ: 25/02/2013ರ ಆದೇಶದಲ್ಲಿ** ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯನ್ನು ಈ ಕೆಳಕಂಡಂತೆ ರಚಿಸಲಾಗಿದೆ.

| **ಕ್ರ.ಸಂ.** | **ಅಧಿಕಾರಿಗಳು** | **ಪದನಾಮ** |
|---|---|---|
| 1 | ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, | ಅಧ್ಯಕ್ಷರು. |
| 2 | ಲೀಡ್ ಬ್ಯಾಂಕ್ ವ್ಯವಸ್ಥಾಪಕರು | ಸದಸ್ಯರು |
| 3 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಸದಸ್ಯರು |
| 4 | ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. | ಸದಸ್ಯರು |

| | | |
|---|---|---|
| 5 | ಪ್ರಧಾನ ವ್ಯವಸ್ಥಾಪಕರು, ಜಿಲ್ಲಾ ಕೈಗಾರಿಕಾ ಕೇಂದ್ರ | ಸದಸ್ಯರು |
| 6 | ಸಹಕಾರ ಸಂಘಗಳ ಉಪ ನಿಬಂಧಕರು. | ಸದಸ್ಯರು |
| 7 | ಜನರಲ್ ಮ್ಯಾನೇಜರ್ (ಸೂಪರಿನ್‌ಟೆಂಡೆಂಟ್ ಇಂಜಿನಿಯರ್) ವಿದ್ಯುತ್ ಸರಬರಾಜು ಕಂಪನಿ | ಸದಸ್ಯರು |
| 8 | ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | ಸದಸ್ಯ ಕಾರ್ಯದರ್ಶಿ |

ಸರ್ಕಾರದ ಆದೇಶ ಸಂಖ್ಯೆ: ಸಕಇ 36 ಬಿಸಿಎ 2012, ದಿನಾಂಕ: 12/04/2012ರಲ್ಲಿ ಸಮಾಜ ಕಲ್ಯಾಣ ವ್ಯಾಪ್ತಿಯ ಅಡಿಯಲ್ಲಿ ಬರುವ ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಮತ್ತು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಯೋಜನೆಗಳ ಫಲಾನುಭವಿಗಳ ಆಯ್ಕೆ ಹಾಗೂ ಮರುಪಾವತಿ ಬಗ್ಗೆ ಆಯ್ಕೆ ಸಮಿತಿಯು ಅನುಸರಿಸಬೇಕಾದ ಮಾರ್ಗಸೂಚಿಗಳು:

## ಆಯ್ಕೆಯ ವಿಧಾನ ಮತ್ತು ಮಾರ್ಗಸೂಚಿಗಳು:

**ಸರ್ಕಾರದ ಆದೇಶ ಸಂಖ್ಯೆ: ಸಕಇ 36 ಬಿಸಿಎ 2012, ದಿನಾಂಕ: 12/04/2012ರಲ್ಲಿ ನಿಗಮಗಳ ವಿವಿಧ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಆಯ್ಕೆ ಸಮಿತಿಯು ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲು ತಿಳಿಸಲಾಗಿರುತ್ತದೆ.**

1. ಆಯಾ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಆರ್ಥಿಕ ವರ್ಷಕ್ಕೆ ಲಭ್ಯವಾಗುವ ಆಯವ್ಯಯವನ್ನು ಅವಲಂಭಿಸಿ ವಿಧಾನಸಭಾ ಕ್ಷೇತ್ರವಾರು ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗಧಿಪಡಿಸಿ ಮೇ/ಜೂನ್ ತಿಂಗಳಲ್ಲಿಯೇ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ತಿಳಿಸತಕ್ಕದ್ದು.
2. ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದಂತೆ, (ಗಂಗಾ ಕಲ್ಯಾಣ ಯೋಜನೆಯನ್ನು ಸೇರಿಸಿ) ಆಯಾ ನಿಗಮಗಳ ಜಿಲ್ಲಾ ವ್ಯವಸ್ಥಾಪಕರುಗಳು ವರ್ಷದ ಮೇ/ಜೂನ್ ತಿಂಗಳಗಳಲ್ಲಿ ಪತ್ರಿಕಾ ಪ್ರಕಟಣೆಗಳ ಮುಖಾಂತರ ಮತ್ತು ಕರಪತ್ರಗಳ ಮುಖಾಂತರ ವಿವಿಧ ಚಟುವಟಿಕೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವುದು.
3. ವಿವಿಧ ಯೋಜನೆಗಳಿಗೆ ಅರ್ಜಿಗಳನ್ನು ಮುದ್ರಿಸಿ ಫಲಾನುಭವಿಗಳಿಗೆ ಲಭ್ಯವಾಗುವಂತೆ ವ್ಯವಸ್ಥೆ ಮಾಡತಕ್ಕದ್ದು.
4. ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವನ್ನು 30/05/2017ನೇ ತಾರೀಖು ಎಂದು ನಿಗದಿಪಡಿಸಿದೆ. ಕೊನೆಯ ತಾರೀಖಿನ ನಂತರ ಬಂದ ಅರ್ಜಿಗಳನ್ನು ಪರಿಗಣಿಸತಕ್ಕದ್ದಲ್ಲ.
5. ಆಯಾ ದಿನ ಬಂದ ಅರ್ಜಿಗಳನ್ನು ಆಯಾ ದಿನವೇ ಜಿಲ್ಲಾ ವ್ಯವಸ್ಥಾಪಕರುಗಳು ಕ್ರಮ ಸಂಖ್ಯೆ ನೀಡಿ ತಾಲ್ಲೂಕುವಾರು/ಕ್ಷೇತ್ರವಾರು ಕಂಪ್ಯೂಟರ್‌ನಲ್ಲಿ ಅರ್ಜಿದಾರರ ಹೆಸರುಗಳನ್ನು ನಮೂದಿಸುವುದು.
6. ಬಂದಿರುವ ಅರ್ಜಿಗಳನ್ನು ಆಯಾ ಯೋಜನೆಗಳಿಗೆ ನಿಗಧಿಪಡಿಸಿದ ಅರ್ಹತೆಗಳು ಹೊಂದಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಪರಿಶೀಲಿಸಿ ಅರ್ಹತೆ ಹೊಂದಿರುವವರ ಪಟ್ಟಿಯನ್ನು ತಯಾರಿಸಿ ಕಂಪ್ಯೂಟರೀಕರಣ ಮಾಡುವುದು. ಅನರ್ಹರಾಗಿರುವ ಅರ್ಜಿಗಳನ್ನು ಸಹ ಪಟ್ಟಿ ಮಾಡುವುದು.

7. ಜಿಲ್ಲಾ ವ್ಯವಸ್ಥಾಪಕರು ಆಯ್ಕೆ ಸಮಿತಿಯ ಅಧ್ಯಕ್ಷರಿಗೆ ಪತ್ರ ಬರೆದು, ಆಯ್ಕೆ ಸಮಿತಿಯನ್ನು **ಜೂನ್/ಜುಲೈ ಮಾಹೆಯೊಳಗೆ ಆಯ್ಕೆ ಸಮಿತಿ ಸಭೆ ನಡೆಸಿ, ಫಲಾನುಭವಿಗಳನ್ನು ಆಯ್ಕೆ ಮಾಡುವುದು.** ಆಯ್ಕೆ ಸಮಿತಿ ಸಭೆಯನ್ನು ಸರ್ಕಾರದ ಕಛೇರಿ/ಸ್ಥಳಗಳಲ್ಲಿ ಮಾತ್ರ ನಡೆಸತಕ್ಕದ್ದು.

8. ಅರ್ಹ ಅರ್ಜಿದಾರರ ಪಟ್ಟಿಯನ್ನು ಮತ್ತು ಅನರ್ಹ ಅರ್ಜಿಗಳ ಪಟ್ಟಿಯನ್ನು ಆಯ್ಕೆ ಸಮಿತಿ ಮುಂದೆ ಮಂಡಿಸಿ, ಆಯಾ ಕ್ಷೇತ್ರಕ್ಕೆ ನಿಗದಿಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿಯಂತೆ ಅರ್ಹ ಅರ್ಜಿದಾರರನ್ನು ಆಯ್ಕೆ ಮಾಡಬೇಕು. ಹಾಗೂ ಶೇ.10ರಷ್ಟು ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆ ಮಾಡಬೇಕು. ಅರ್ಜಿ ಸಲ್ಲಿಸಿರುವ ಎಲ್ಲಾ ಅರ್ಜಿದಾರರನ್ನು ಆಯ್ಕೆ ಮಾಡಿದಲ್ಲಿ ಅಥವ ಅರ್ಜಿ ಹಾಕದೆ/ಸಲ್ಲಿಸದೆ ಇರುವವರನ್ನು ಆಯ್ಕೆ ಮಾಡಿದಲ್ಲಿ ಅಂತಹ ಆಯ್ಕೆ ಕ್ರಮಬದ್ಧವಾಗಿರುವುದಿಲ್ಲ. ಈ ಆಯ್ಕೆಯನ್ನು ಮಂಜೂರಾತಿಗೆ ಪರಿಗಣಿಸಬಾರದು. **ಅನರ್ಹ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡತಕ್ಕದ್ದು.** ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಂದ ಫಲಾನುಭವಿಗಳ ಆಯ್ಕೆಯನ್ನು ಜುಲೈ–ಆಗಸ್ಟ್–2017 ರೊಳಗೆ ಪೂರ್ಣಗೊಳಿಸಬೇಕು.

**9.** ***ಆಗಸ್ಟ್–2017ರ ಅಂತ್ಯದೊಳಗೆ ಸದರಿ ಸಮಿತಿಗಳು ಆಯ್ಕೆ ಮಾಡದೇ ಇದ್ದಲ್ಲಿ, ಅದನ್ನು ಸರ್ಕಾರಕ್ಕೆ ತಿಳಿಸತಕ್ಕದ್ದು ಮತ್ತು ಮುಂದಿನ ಕ್ರಮದ ಬಗ್ಗೆ ಸರ್ಕಾರದ ಮಟ್ಟದಲ್ಲಿ ಕ್ರಮ ಜರುಗಿಸಲಾಗುವುದು.***

10. ಬ್ಯಾಂಕಿನ ಸಹಯೋಗದೊಂದಿಗೆ ಅನುಷ್ಠಾನಗೊಳಿಸುವ ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆಯಲ್ಲಿ ನಿಗದಿಪಡಿಸಿದ ಜಿಲ್ಲಾವಾರು/ಕ್ಷೇತ್ರವಾರು ಗುರಿಯನ್ನು ಆಯಾ ಜಿಲ್ಲೆಯ ಲೀಡ್ ಬ್ಯಾಂಕ್ ಮೂಲಕ ಜಿಲ್ಲಾ ಸಮನ್ವಯ ಸಮಿತಿ ಸಭೆಯಲ್ಲಿ ಮಂಡಿಸಿ ಬ್ಯಾಂಕ್‌ವಾರು/ಶಾಖಾವಾರು ಗುರಿಯನ್ನು ನಿಗದಿಪಡಿಸಿಬೇಕು. ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿ ಸಭೆಯನ್ನು ಆಗಸ್ಟ್ ಮಾಹೆಯಲ್ಲಿ ಏರ್ಪಡಿಸಿ ಗುರಿಯನ್ನು ಸಮಿತಿ ಸಭೆಯ ಗಮನಕ್ಕೆ ತರುವುದು. ಹಾಗೂ ಲೀಡ್ ಬ್ಯಾಂಕ್ ಮೂಲಕ ಬ್ಯಾಂಕ್‌ವಾರು/ಶಾಖಾವಾರು ಗುರಿ ನಿಗದಿಪಡಿಸಿ, ನಿಗದಿಪಡಿಸಿದ ಗುರಿಯಂತೆ ಅರ್ಜಿಗಳನ್ನು 1:1.25ರ ಅನುಪಾತದಲ್ಲಿ ಶಿಫಾರಸ್ಸು ಮಾಡುವ ಬಗ್ಗೆ ಸಮಿತಿಯ ಅನುಮೋದನೆ ಪಡೆಯುವುದು. ಜಿಲ್ಲಾಮಟ್ಟದ ಆಯ್ಕೆ ಸಮಿತಿಯಲ್ಲಿ ಅನುಮೋದನೆ ಪಡೆದ ಫಲಾನುಭವಿಗಳ ಅರ್ಜಿಗಳನ್ನು ವಾಣಿಜ್ಯ ಬ್ಯಾಂಕ್‌ಗಳಿಗೆ ಮತ್ತು ಆರ್.ಆರ್.ಬಿ.ಗಳಿಗೆ ಸಾಲ ಮಂಜೂರಾತಿಗಾಗಿ ತಕ್ಷಣವೇ ಕಳುಹಿಸುವುದು. ಸಂಬಂಧಿಸಿದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಡಿ.ಎಲ್.ಬಿ.ಸಿ./ಬಿ.ಎಲ್.ಬಿ.ಸಿ. ಬ್ಯಾಂಕ್‌ಗಳ ಸಭೆಗಳಲ್ಲಿ ತಪ್ಪದೇ ಭಾಗವಹಿಸಿ ಅರ್ಜಿಗಳಿಗೆ ಮಂಜೂರಾತಿ ಪಡೆಯಲು ಕ್ರಮವಹಿಸತಕ್ಕದ್ದು.

11. ಸೌಲಭ್ಯ ಕೋರಿ ಬರುವ ಅರ್ಜಿದಾರರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಎಲ್ಲಾ ಉಪಜಾತಿಗಳಿಗೂ ಪ್ರಾತಿನಿಧ್ಯತೆ ನೀಡುವುದು. ವಿಶೇಷವಾಗಿ ಅತೀ ಹಿಂದುಳಿದ ಸಮುದಾಯಗಳಿಗೆ ಆದ್ಯತೆ ನೀಡಬೇಕು.

12. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಸರ್ಕಾರದ ಆದೇಶ ಸಂಖ್ಯೆ: ಸಕಇ/573/ಬಿಸಿಎ/1995, ದಿನಾಂಕ:23/02/1996ರಲ್ಲಿ ನಿಗಧಿಪಡಿಸಿರುವ ಮೀಸಲಾತಿಯಂತೆ ಪ್ರವರ್ಗ 1 ಮತ್ತು 2ಎಗೆ ಶೇಕಡ 70ರಷ್ಟು ಪ್ರವರ್ಗ 3ಎ ಮತ್ತು 3ಬಿಗೆ ಶೇಕಡ 30ರಷ್ಟು ಆಯ್ಕೆ ಮಾಡತಕ್ಕದ್ದು. ಪ್ರವರ್ಗ1 ಮತ್ತು 2ಎನಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಹಿಂದುಳಿದ ವರ್ಗಗಳಲ್ಲಿ ಅತ್ಯಂತ ಹಿಂದುಳಿದ ಅಲೆಮಾರಿ/ಅರೆ ಅಲೆಮಾರಿ ಜನಾಂಗಕ್ಕೆ ಹಾಗೂ ಇತರೆ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಹಾಗೂ ಈವರೆವಿಗೂ ನಿಗಮದಿಂದ ಸೌಲಭ್ಯವನ್ನು ಪಡೆಯದೇ ಇರುವ ಜಾತಿಗಳಿಗೆ ಆದ್ಯತೆ ನೀಡುವುದು.

13. **ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಶೇಕಡ 33ರಷ್ಟು ಮಹಿಳೆಯರಿಗೆ ಮತ್ತು ಶೇಕಡಾ 3ರಷ್ಟು ಅಂಗವಿಕಲರಿಗೆ ಆಯ್ಕೆ ಮಾಡುವುದು.**

**14.** ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳನ್ನು ಅಂತರ್ಜಲ ಲಭ್ಯವಿರುವ ಪ್ರದೇಶಗಳಿಗೆ ಮತ್ತು ಶಾಶ್ವತ ನೀರಾವರಿ ಇಲ್ಲದ ಪ್ರದೇಶಗಳಿಗೆ ಆದ್ಯತೆ ನೀಡುವುದು. ಅಂತರ್ಜಲ ಕುಸಿದು ಆಳದ ಮಟ್ಟಕ್ಕೆ ಹೋಗಿದ್ದ ಪ್ರದೇಶಗಳಲ್ಲಿ **(Red areas/Over Exploited)** **<u>ಇತರೆ ಸ್ವಯಂ ಉದ್ಯೋಗ ಯೋಜನೆಗಳಲ್ಲಿ ಹೆಚ್ಚಿನ ಆದ್ಯತೆ ನೀಡುವುದು.</u>**

15. ಆಯ್ಕೆ ಸಮಿತಿಯು ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಆಯಾ ಯೋಜನೆಗಳಲ್ಲಿ ಸರ್ಕಾರವು/ನಿಗಮಗಳು ಆಗಿಂದಾಗ್ಗೆ ಹೊರಡಿಸಿರುವ **ಆದೇಶ ಮತ್ತು ಮಾರ್ಗಸೂಚಿಗಳ ಪ್ರಕಾರವೆ ಆಯ್ಕೆ ಮಾಡುವುದು. ಜಿಲ್ಲಾ ವ್ಯವಸ್ಥಾಪಕರುಗಳು ಮಾರ್ಗಸೂಚಿಗಳನ್ನು ಆಯ್ಕೆ ಸಭೆಯ ಗಮನಕ್ಕೆ ತಂದು ಓದಿ ನಡವಳಿಗಳಲ್ಲಿ ದಾಖಲಿಸುವುದು.**

16. ಆಯಾ ಕಾರ್ಯಕ್ರಮಗಳ ಮಾರ್ಗಸೂಚಿಗಳನ್ವಯ ನಿಗದಿಪಡಿಸಿದ ದಾಖಲೆಗಳನ್ನು ಒದಗಿಸಿರುವ ಫಲಾನುಭವಿಗಳ ಆರ್ಹತೆ ಪರಿಶೀಲಿಸಿ ಆಯ್ಕೆ ಸಮಿತಿಯ ಮುಂದೆ ಮಂಡಿಸಿ ಆಯ್ಕೆಗೆ ಕ್ರಮ ವಹಿಸಬೇಕು. ***<u>ಅರ್ಜಿಗಳನ್ನು ಸಲ್ಲಿಸದೇ ಇರುವ ಮತ್ತು ದಾಖಲೆಗಳನ್ನು ಸಲ್ಲಿಸದೇ ಇರುವ ಅರ್ಜಿದಾರರನ್ನು ಆಯ್ಕೆಗೆ ಪರಿಗಣಿಸಬಾರದು.</u>*** ಸಮಿತಿಯಿಂದ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಸಾಲ ಸೌಲಭ್ಯವನ್ನು ಮಂಜೂರು ಮಾಡುವ ಮೊದಲು ಮಂಜೂರಾತಿ ಅಧಿಕಾರಿಗಳು ಆಯಾ ಯೋಜನೆಗಳಲ್ಲಿ ನಿಗದಿಪಡಿಸಿರುವ ದಾಖಲೆಗಳನ್ನು ಒದಗಿಸದೆ ಇದ್ದಲ್ಲಿ ಅವುಗಳನ್ನು ಒಂದು ವಾರದೊಳಗಾಗಿ ಒದಗಿಸುವಂತೆ ಪತ್ರ ಕಳುಹಿಸಿ ಅಗತ್ಯ ದಾಖಲೆಗಳನ್ನು ಪಡೆಯುವುದು. ಒಂದು ವೇಳೆ ದಾಖಲೆಗಳನ್ನು ಒದಗಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಬಾರದು. ಸಾಲ ಮಂಜೂರು ಮಾಡಿದ ನಂತರ ಫಲಾನುಭವಿಯ ಹೆಸರು ಮತ್ತು ಅವರು ಹೊಂದಿರುವ ಬ್ಯಾಂಕ್ ಖಾತೆ ಸಂಖ್ಯೆ ಸೇರಿಸಿ ಕ್ರಾಸ್ಡ್ ಚೆಕ್ ಅನ್ನು ರಚಿಸಿ ಬಿಡುಗಡೆ ಮಾಡುವುದು. ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸಿಕೊಂಡು ಘಟಕ ಸ್ಥಾಪಿಸಿ ನಿರ್ವಹಿಸಲು ಫಲಾನುಭವಿಗೆ ತಿಳಿಸತಕ್ಕದ್ದು.

17. ಸಾಲ ಸೌಲಭ್ಯ ಬ್ಯಾಂಕ್‌ಗಳಿಂದ ಮಂಜೂರು ಮಾಡಿದ್ದಲ್ಲಿ ಸಹಾಯಧನವನ್ನು ಬ್ಯಾಂಕ್ ಮುಖಾಂತರ ಸಾಲದ ಜೊತೆಗೆ ಫಲಾನುಭವಿಗಳಿಗೆ ಬ್ಯಾಂಕ್‌ಗಳು ವಿತರಿಸಬೇಕು. ಒಂದು ವೇಳೆ ಬ್ಯಾಂಕ್‌ಗಳು ಮಂಜೂರಾದ ಸಾಲದ ಮೊತ್ತವನ್ನು ವಿತರಿಸದೆ ಬರೀ **ಸಹಾಯಧನ/ ಮಾರ್ಜಿನ್‌ಹಣದ ಮೊತ್ತವನ್ನು ಮಾತ್ರ ವಿತರಣೆ ಮಾಡಿದ್ದಲ್ಲಿ ಅಂತಹ ಪ್ರಕರಣಗಳನ್ನು ಪತ್ತೆ ಹಚ್ಚಿ ನಿಗಮದ ಕೇಂದ್ರ ಕಛೇರಿಗೆ ವರದಿ ಮಾಡಬೇಕು** ಹಾಗೂ ಬಿ.ಎಲ್.ಬಿ.ಸಿ. ಸಭೆಯ ಗಮನಕ್ಕೆ ಕಡ್ಡಾಯವಾಗಿ ತರಬೇಕು.

18. ಸಾಲ ಪಡೆದ ಫಲಾನುಭವಿಗಳು ಸಾಲವನ್ನು ಸದುಪಯೋಗ ಪಡಿಸಿಕೊಂಡಿರುವ ಬಗ್ಗೆ 3ನೇ ಪಾರ್ಟಿಯಿಂದ ತನಿಖೆ ಮಾಡಿಸಿ ವರದಿ ಪಡೆಯತಕ್ಕದ್ದು. ದುರಪಯೋಗ ಮಾಡಿರುವ ಪ್ರಕರಣಗಳನ್ನು ಪತ್ತೆ ಮಾಡಿ ಕಾನೂನು ಪ್ರಕಾರ ಕ್ರಮ ಜರುಗಿಸುವುದು.

**19.** ***ಆಯ್ಕೆ ಸಮಿತಿಗಳು ಫಲಾನುಭವಿಗಳನ್ನು ಆಯ್ಕೆ ಮಾಡಿದ ನಂತರ ನಿಗಮದಿಂದ ಸಾಲ/ಸಹಾಯಧನ ಮಂಜೂರು ಮಾಡಿದ ಪ್ರಗತಿ ಬಗ್ಗೆ, ಸಾಲ ಪಡೆದ ಫಲಾನುಭವಿಗಳು ಸಾಲವನ್ನು ಸದುಪಯೋಗಪಡಿಸಿಕೊಂಡಿರುವ ಬಗ್ಗೆ ಹಾಗೂ ಸಾಲ ಮರುಪಾವತಿ ಮಾಡುತ್ತಿರುವ ಬಗ್ಗೆ ಆಯ್ಕೆ ಸಮಿತಿಯು ವರ್ಷದಲ್ಲಿ ಕನಿಷ್ಠ 2 ಬಾರಿ ಸಭೆ ಸೇರಿ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸುವುದು.***

20. ಮಂಜೂರಾದ ಸಾಲದ ಸದುಪಯೋಗದ ಬಗ್ಗೆ ಮರುಪಾವತಿ ಬಗ್ಗೆ ಮತ್ತು ಒದಗಿಸುವ ದಾಖಲಾತಿಗಳ ಬಗ್ಗೆ ತಿಳುವಳಿಕೆ ಮೂಡಿಸಲು ಸಾಲ ಮಂಜೂರಾತಿ ಪೂರ್ವ ಸಮಾಲೋಚನೆ ಸಭೆಗಳನ್ನು (Pre Disbursement Counselling) ಏರ್ಪಡಿಸಬೇಕು.

21. ಸಾಲ ಮರುಪಾವತಿ ಮಾಡುವ ಬಗ್ಗೆ ಸೂಕ್ತ ಸಮಯದಲ್ಲಿ ನೋಟೀಸ್‌ಗಳನ್ನು ನೀಡಿ ಮರುಪಾವತಿ ಸಂಗ್ರಹ ಕಾರ್ಯಕ್ರಮಗಳನ್ನು ನಡೆಸಿ ಹೆಚ್ಚಿನ ಮೊತ್ತದಲ್ಲಿ ವಸೂಲು ಮಾಡಲು ಕ್ರಮ ತೆಗೆದುಕೊಳ್ಳುವುದು.

## ನಿಗಮದಿಂದ ಮಂಜೂರು ಮಾಡಿದ ಸಾಲದ ಭದ್ರತೆಗೆ ಪಡೆಯಬೇಕಾದ ಭದ್ರತಾ ದಾಖಲಾತಿಗಳು

ದಿ:07/03/2003ರ ನಿಗಮದ ಸುತ್ತೋಲೆ ಸಂ:ಕಪಿನಿ/ವ್ಯ/ಸಿಆರ್–100/2002–03ರನ್ವಯ ನಿಗದಿತ ಮೊತ್ತಗಳಿಗೆ ನಿಗದಿಪಡಿಸಿದ ದಸ್ತಾವೇಜುಗಳನ್ನು ಈ ಕೆಳಕಂಡಂತೆ ಪಡೆಯುವುದು.

1) ಪ್ರಾಮಿಸರಿ ನೋಟ್
2) ಲೆಟರ್ ಆಫ್ ರೀಪೆಮೆಂಟ್ – ಫಲಾನುಭವಿಯಿಂದ
3) ಹೈಪಾಥಿಕೇಷನ್ ಡೀಡ್
4) ಲೆಟರ್ ಆಫ್ ಗ್ಯಾರಂಟಿ – ಜಾಮೀನುದಾರರಿಂದ
5) ಮೆಮೊರೆಂಡಮ್ ಆಫ್ ಅಗ್ರಿಮೆಂಟ್ – ಸ್ವಸಹಾಯ ಗುಂಪುಗಳಿಂದ
6) ಸಹಾಯಧನ ವಿತರಣೆ ಪ್ರಮಾಣ ಪತ್ರ.
7) ಸಹಾಯಧನ ಬಳಕೆ ಬಗ್ಗೆ ಸಾಲ ಪಡೆದವರಿಂದ ಘೋಷಣೆ.
8) ರೂ.1,00,000/–ಗಳಿಗಿಂತ ಹೆಚ್ಚಿನ ಸಾಲಕ್ಕೆ ಸ್ಥಿರಾಸ್ತಿ ಆಧಾರ ಮಾಡಿದ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಿದ(Registered) ದಾಖಲೆಗಳು.

**ವಿಮೆ**

**ನಿಗಮದ ಯೋಜನೆಗಳ ಸಾಲದಿಂದ ಉತ್ಪನ್ನವಾದ ಘಟಕ/ಆಸ್ತಿಯನ್ನು ಬೆಂಕಿ, ನೀರು, ಭೂಕಂಪ, ಕಳ್ಳತನ ಇತ್ಯಾದಿ ಪ್ರಕೋಪಗಳಿಂದ ಆಗುವ ನಷ್ಟವನ್ನು ತಪ್ಪಿಸಲು ಕಡ್ಡಾಯವಾಗಿ ವಿಮೆ ಮಾಡಿಸಬೇಕು. ವಿಮಾ ಪ್ರೀಮಿಯಮ್ ಮೊತ್ತವನ್ನು ಫಲಾನುಭವಿಗಳು ಭರಿಸಬೇಕು.**

## 2017–18ನೇ ಸಾಲಿನಲ್ಲಿ ವಿವಿಧ ಸಾಲದ ಯೋಜನೆಗಳ ಅನುಷ್ಠಾನದ ವೇಳಾಪಟ್ಟಿ

| ಕ್ರ.ಸಂ. | ವಿವರ | ವೇಳಾ ಪಟ್ಟಿ |
|---|---|---|
| 1 | ಅರ್ಜಿಗಳ ಆಹ್ವಾನಕ್ಕಾಗಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸುವ ದಿನಾಂಕ. | 28/04/2017 |
| 2 | ಅರ್ಜಿಗಳನ್ನು ವಿತರಿಸಲು ಕೊನೆಯ ದಿನಾಂಕ: | 31/05/2017 |
| 3 | ಭರ್ತಿ ಮಾಡಿದ ಅರ್ಜಿಯನ್ನು ಆಯಾ ಜಿಲ್ಲಾ ಕಛೇರಿಗೆ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ | 09/06/2017 |
| 4 | ಅರ್ಜಿಗಳನ್ನು ಆಯ್ಕೆ ಸಮಿತಿ ಮುಂದೆ ಮಂಡಿಸಲು | 30/06/2017 |
| 5 | ಕೇಂದ್ರ ಕಛೇರಿ/ವಿಭಾಗೀಯ ಕಛೇರಿಗೆ ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ | ಆಗಸ್ಟ್–2017ರ ಮಾಹೆ |
| 6 | ಹಣ ಬಿಡುಗಡೆ ಮಾಡಲು ಕೊನೆಯ ದಿನಾಂಕ: | ಸೆಪ್ಟಂಬರ್ ಮತ್ತು ಆಕ್ಟೋಬರ್ 2017ರ ಮಾಹೆ |

| | | |
|---|---|---|
| 7 | ಜಿಲ್ಲಾ ಕಚೇರಿಯಲ್ಲಿ ಚೆಕ್ ಸ್ವೀಕರಿಸಿದ 15 ದಿನದೊಳಗಾಗಿ ಫಲಾನುಭವಿಗಳಿಗೆ ವಿತರಿಸುವುದು | ನವೆಂಬರ್ – 2017ರ ಮಾಹೆ |
| 8 | ಚೆಕ್ ವಿತರಿಸಿದ ಒಂದು ತಿಂಗಳ ನಂತರ ಫಲಾನುಭವಿ ಸಾಲದ ಸದುಪಯೋಗ ಪಡಿಸಿಕೊಂಡು ಘಟಕ ಸ್ಥಾಪಿಸಿದ ಬಗ್ಗೆ ಪರಿಶೀಲನೆ ಮಾಡುವುದು. | ಡಿಸೆಂಬರ್–2017ರ ಮಾಹೆ |

## 2017–1/ನೇ ಸಾಲಿನಲ್ಲಿ ಗಂಗಾ ಕಲ್ಯಾಣ ನೀರಾವರಿ ಯೋಜನೆಯ ಅನುಷ್ಠಾನದ ವೇಳಾಪಟ್ಟಿ

| ಕ್ರ. ಸಂ. | ವಿವರ | ವೇಳಾ ಪಟ್ಟಿ |
|---|---|---|
| 1 | ಅರ್ಜಿಗಳ ಆಹ್ವಾನಕ್ಕಾಗಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸುವ ದಿನಾಂಕ. | 28/04/2017 |
| 2 | ಅರ್ಜಿಗಳನ್ನು ವಿತರಿಸಲು ಕೊನೆಯ ದಿನಾಂಕ: | 31/05/2017 |
| 3 | ಭರ್ತಿ ಮಾಡಿದ ಅರ್ಜಿಯನ್ನು ಆಯಾ ಜಿಲ್ಲಾ ಕಛೇರಿಗೆ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ | 09/06/2017 |
| 4 | ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿ ಮುಂದೆ ಮಂಡಿಸಲು ಕೊನೆಯ ದಿನಾಂಕ | 30/06/2017 |
| 5 | ಅರ್ಹ ಫಲಾನುಭವಿಗಳನ್ನು ಆಯ್ಕೆ ಸಮಿತಿ ಮೂಲಕ ಆಯ್ಕೆ ಹಾಗೂ ಅರ್ಹತೆ ಬಗ್ಗೆ ಪರಿಶೀಲನೆ | ಜುಲೈ–17ರ ಮಾಹೆ |
| 6 | ಆಯ್ಕೆ ಸಮಿತಿ ಆಯ್ಕೆ ಮಾಡಿದ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ಅನುಮೋದನೆಗೆ ಸಲ್ಲಿಸುವುದು. | ಆಗಸ್ಟ–17ರ ಮಾಹೆ |
| 7 | ಕೇಂದ್ರ ಕಛೇರಿಯಿಂದ ಕೊಳವೆ ಬಾವಿ ಕೊರೆಯಲು ಕಾರ್ಯಾದೇಶ ನೀಡುವುದು. | ಸೆಪ್ಟಂಬರ್–17ರ ಮಾಹೆ |
| 8 | ಭೂ ವಿಜ್ಞಾನಿಗಳಿಂದ ಜಲಬಿಂಧು ಗುರುತಿಸುವಿಕೆ ಹಾಗೂ ಕೊಳವೆ ಬಾವಿ ಕೊರೆಯಿಸುವುದು. | ಆಕ್ಟೋಬರ್–17 ಹಾಗೂ ನವೆಂಬರ್–17 ಮಾಹೆಗಳು |
| 9 | ಪಂಪ್‌ಸೆಟ್ ಮತ್ತು ಉಪಕರಣಗಳ ಸರಬರಾಜು ಹಾಗೂ ವಿದ್ಯುದ್ಧೀಕರಣಕ್ಕೆ ಕ್ರಮ ವಹಿಸುವುದು | ಡಿಸೆಂಬರ್–17 ಮತ್ತು ಜನವರಿ–18 ಮಾಹೆಗಳು |

## <u>ಯೋಜನೆಗಳನ್ನು ಯಶಸ್ವಿಗೊಳಿಸಲು ಅನುಸರಿಸಬೇಕಾದ ಕ್ರಮಗಳು:</u>

- <u>**ವಿವಿಧ ಸಮುದಾಯಗಳ ಸಭೆ ಕರೆಯುವುದು:**</u> ಹಿಂದುಳಿದ ವರ್ಗಗಳಿಗೆ ಸೇರಿದ ವಿವಿಧ ಸಮುದಾಯಗಳ ಮುಖಂಡರುಗಳ ಸಭೆ ಕರೆದು ನಿಗಮದ ಯೋಜನೆಗಳ ಅನುಷ್ಠಾನದ ಕುರಿತು ವಿಚಾರ ವಿನಿಮಯ ಮಾಡಿಕೊಂಡು ಅಗತ್ಯ ಕ್ರಮ ವಹಿಸುವುದು.
- <u>**ಸ್ವೀಕರಿಸಿದ ಅರ್ಜಿಗಳ ಪಟ್ಟಿ ತಯಾರಿಕೆ:**</u> ಆಯಾ ದಿನ ಸ್ವೀಕರಿಸಿದ ಅರ್ಜಿಗಳನ್ನು ಯೋಜನಾವಾರು, ವಿಧಾನಸಭಾ ಕ್ಷೇತ್ರವಾರು ಕಡ್ಡಾಯವಾಗಿ ಗಣಕೀಕರಣಗೊಳಿಸುವುದು ಹಾಗೂ ಮರುದಿನ ಕೇಂದ್ರ ಕಛೇರಿಗೆ ವರದಿಸುವುದು. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ನಂತರದ ಒಂದು ವಾರದೊಳಗೆ ಎಲ್ಲಾ ಅರ್ಜಿಗಳ ಗಣಕೀಕರಣ ಕಾರ್ಯ ಪೂರ್ಣಗೊಳಿಸತಕ್ಕದ್ದು,
- <u>**ಸಂವಾದ:**</u> ನಿಗಮದ ಯೋಜನೆಗಳ ಬಗ್ಗೆ ಅರಿವು ಹಾಗೂ ಅನುಷ್ಠಾನದಲ್ಲಿನ ನ್ಯೂನತೆ ಮತ್ತು ಕೊರತೆಗಳನ್ನು ತಿಳಿಯಲು ಜಿಲ್ಲಾ/ತಾಲ್ಲೂಕು/ಗ್ರಾಮ ಮಟ್ಟದಲ್ಲಿ **"ಸಂವಾದ"** ಕಾರ್ಯಕ್ರಮಗಳನ್ನು

ಮತ್ತು ಕುಂದುಕೊರತೆ ನಿವಾರಣಾ ಕಾರ್ಯಕ್ರಮಗಳನ್ನು ಪ್ರತಿ ತಿಂಗಳು ಕಡ್ಡಾಯವಾಗಿ ಹಮ್ಮಿಕೊಳ್ಳುವುದು ಹಾಗೂ ನಿಗಮಕ್ಕೆ ವರದಿ ಮಾಡುವುದು.

- **<u>ಸಾಲ ವಿತರಣಾ ಪೂರ್ವ ಸಮಾಲೋಚನೆ</u>:** ಸಾಲ ಪಡೆಯಲು ಪೂರ್ಣ ಮಾಹಿತಿಯನ್ನು ಫಲಾನುಭವಿಗಳಿಗೆ ನೀಡಲು, ಸಾಲ ಮತ್ತು ಸಬ್ಸಿಡಿಯ ಮಹತ್ವವನ್ನು ತಿಳಿಸಲು, ಸಾಲ ಸದುಪಯೋಗದ ಬಗ್ಗೆ ತಿಳಿಸಲು ಅವರ ಸಾಲಕ್ಕೆ ಮಾರುಕಟ್ಟೆ ವ್ಯವಸ್ಥೆಯನ್ನು ತಿಳಿಸಲು, ಕಡ್ಡಾಯವಾಗಿ ಸಾಲ ವಿತರಣಾ ಪೂರ್ವ ಸಮಾಲೋಚನೆಯನ್ನು ನಿರಂತರವಾಗಿ ಹಮ್ಮಿಕೊಳ್ಳುವುದು.

- **<u>ಸಾಲ ವಿತರಣೋತ್ತರ ಪರ್ಯಾಲೋಚನೆ</u>:** ಸಾಲ ದುರುಪಯೋಗವಾಗುವುದನ್ನು ತಡೆಗಟ್ಟಲು ಯೋಜನೆಯ ಅನುಷ್ಠಾನ ಮತ್ತು ಘಟಕ ಸ್ಥಾಪನೆಯ ಬಗ್ಗೆ ನ್ಯೂನತೆ ಮತ್ತು ಕೊರತೆಗಳ ಬಗ್ಗೆ ತಿಳಿಯಲು ಸಾಲ ಪಡೆದ ಫಲಾನುಭವಿಗಳೊಂದಿಗೆ ಪರ್ಯಾಲೋಚನಾ ಸಭೆಗಳನ್ನು ನಡೆಸುವುದು ಮತ್ತು ಘಟಕಗಳನ್ನು ತಪಾಸಿಸಿ ಸೂಕ್ತ ತಿಳುವಳಿಕೆಯನ್ನು ಫಲಾನುಭವಿಗಳಿಗೆ ನೀಡುವುದು.

- **ಸಂಯೋಜನೆ:** ಗಂಗಾ ಕಲ್ಯಾಣ ನೀರಾವರಿ ಯೋಜನೆಯಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳಿಗೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆಗಳಲ್ಲಿ ದೊರೆಯುವ ಸೌಲಭ್ಯಗಳ ಮಾಹಿತಿಯನ್ನು ಒದಗಿಸಲು ಮಂಥನ ಕಾರ್ಯಕ್ರಮವನ್ನು ಕಡ್ಡಾಯವಾಗಿ ಏರ್ಪಡಿಸುವುದು.

- **<u>ಉದ್ಯಮಶೀಲತಾ ತರಬೇತಿ:</u>** ನಿಗಮದ ವಿವಿಧ ಯೋಜನೆಗಳಲ್ಲಿ ಸಾಲ ಸೌಲಭ್ಯ ಪಡೆದ ಫಲಾನುಭವಿಗಳಿಗೆ ಸಾಲದ ಸದುಪಯೋಗದ ಬಗ್ಗೆ, ಮರುಪಾವತಿ ಬಗ್ಗೆ, ವಿಮೆ ಬಗ್ಗೆ ಹಾಗೂ ಘಟಕ ಸ್ಥಾಪಿಸಿ ಲಾಭದಾಯಕವಾಗಿ ನಿರ್ವಹಿಸುವ ಬಗ್ಗೆ ಬ್ಯಾಂಕಿಂಗ್ ತರಬೇತಿ ಸಂಸ್ಥೆಗಳನ್ನು ಗುರುತಿಸಿ, ಉದ್ಯಮ ಶೀಲತಾ ತರಬೇತಿ ನೀಡಲು ತಗಲುವ ವೆಚ್ಚದ ಬಗ್ಗೆ ತರಬೇತಿ ಸಂಸ್ಥೆಯೊಂದಿಗೆ ಸಮಲೋಚಿಸಿ ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಿ, ಮಂಜೂರಾತಿ ಪಡೆದು, ಜಿಲ್ಲೆಗೆ ನಿಗದಿಪಡಿಸಿದ ತರಬೇತಿ ವೆಚ್ಚದ ಗುರಿಯಲ್ಲಿ ತರಬೇತಿ ಒದಗಿಸುವುದು.

- **ಘಟಕಗಳ ತಪಾಸಣೆ:** ನಿಗಮದಿಂದ ಸೌಲಭ್ಯ ಪಡೆದ ಫಲಾನುಭವಿಗಳು ಸಾಲದ ಮೊತ್ತದಿಂದ ಉತ್ಪನ್ನವಾದ ಘಟಕಗಳನ್ನು ಜಿಲ್ಲಾ ವ್ಯವಸ್ಥಾಪಕರು, ಕಡ್ಡಾಯ ತಪಾಸಣೆ ಮಾಡುವುದು. ತಪಾಸಣೆ ಮಾಡಿದ ವರದಿಯನ್ನು ದಿನಚರಿಯಲ್ಲಿ ದಾಖಲಿಸುವುದು.

## <u>ಸಾಲ ವಸೂಲಾತಿ ಕಾರ್ಯಕ್ರಮ:</u>

- ದಿನಾಂಕ:13/05/2013ರವರೆಗೆ ಸಾಲ ಪಡೆದು ವಸೂಲಾತಿಗೆ ಬಾಕಿ ಇರುವ ಅಸಲು ಮತ್ತು ಬಡ್ಡಿಯನ್ನು ಮನ್ನಾ ಮಾಡಲಾಗಿರುತ್ತದೆ. ಇವುಗಳನ್ನು ಹೊರತುಪಡಿಸಿ ಉಳಿದ ಖಾತೆಗಳಿಂದ ನಿಗಧಿಪಡಿಸಿದ ಕಂತುಗಳನ್ವಯ ಸಾಲ ವಸೂಲಾತಿ ಮಾಡಲು ಕಡ್ಡಾಯವಾಗಿ ಕ್ರಮಕೈಗೊಳ್ಳಬೇಕು.

- ನಿಗಮವು ಜಿಲ್ಲಾ ಕಛೇರಿಗೆ ಸರಬರಾಜು ಮಾಡುವ ಕಂಪ್ಯೂಟರ್‌ಗಳನ್ನು ಇಲ್ಲವೇ ಜಿಲ್ಲಾ ಪಂಚಾಯತ್ ಒದಗಿಸಿರುವ ಕಂಪ್ಯೂಟರ್‌ಗಳನ್ನು ಉಪಯೋಗಿಸಿ, ಸಾಲದ ಖಾತೆಗಳನ್ನು ಕಂಪ್ಯೂಟರೀಕರಣ ಮಾಡುವುದು. ಆಗಿಂದ್ದಾಗೆ ಪಡೆದ ಮರುಪಾವತಿ ಮೊತ್ತವನ್ನು ಗಣಕೀಕೃತಗೊಳಿಸಿ ಫಲಾನುಭವಿವಾರು/ಯೋಜನಾವಾರು ಡಿ.ಸಿ.ಬಿ.ಯನ್ನು ತಯಾರಿಸಿ ಬಾಕಿ ಮೊತ್ತಕ್ಕೆ ನೋಟಿಸ್ ಜಾರಿ ಮಾಡುವುದು. ಒಂದು ಕಂತು ಕಟ್ಟದೆ ಇರುವಂತಹ ಫಲಾನುಭವಿ/ಎಸ್.ಹೆಚ್.ಜಿ.ಗಳ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಖುದ್ದಾಗಿ ಭೇಟಿ ಮಾಡಿ ಸಾಲ ವಸೂಲಾತಿಗೆ ಕ್ರಮ ವಹಿಸುವುದು.

- ಒಂದೆರಡು ನೋಟೀಸ್‌ಗಳಿಗೆ ಫಲಾನುಭವಿಗಳು ಪ್ರತಿಕ್ರಿಯಿಸದಿದ್ದರೆ, ಅಂತಿಮ ನೋಟೀಸ್‌ನ್ನು ಜಾರಿ ಮಾಡುವುದು ಮತ್ತು ಸ್ಥಳ, ದಿನಾಂಕ ಮತ್ತು ವೇಳೆಯನ್ನು ನಿಗದಿಪಡಿಸಿ, ಸಂವಾದ ಕಾರ್ಯಕ್ರಮವನ್ನು ಸಂಘಟಿಸಿ, ಸಾಲ ವಸೂಲಾತಿಗೆ ಫಲಾನುಭವಿಗಳ ಮನವೊಲಿಸಲು ಸಂಘಟಿತ ಕ್ರಮವಹಿಸುವುದು ಹಾಗೂ ನಿಗಮದ ಕರ್ತೃತ್ವ ಕ್ರಮಗಳನ್ನು ಫಲಾನುಭವಿಗಳಿಗೆ ತಿಳುವಳಿಕೆ ಮೂಡಿಸುವುದು.

- ಫಲಾನುಭವಿಗಳ ದೂರವಾಣಿ ಸಂಖ್ಯೆ ಸಂಗ್ರಹಿಸಿ, ಸಾಲದ ಖಾತ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ಸಾಲ ಮರುಪಾವತಿಗೆ ಕರೆ ಮಾಡಿ ಮಾಡಿ ಮರುಪಾವತಿಗೆ ಕ್ರಮ ವಹಿಸುವುದು.

- **ಮರುಪಾವತಿ ಅಂದೋಲನ ಕಾರ್ಯ**: ಸಾಲ ಮರುಪಾವತಿ ತೀವ್ರಗೊಳಿಸಲು ಫಲಾನುಭವಿಯು ಗ್ರಾಮದಿಂದ ಜಿಲ್ಲಾ ಕಛೇರಿಗೆ ಬಂದು ಪಾವತಿಸುವಲ್ಲಿ ಅನಾನುಕೂಲವಾಗಿ ಮರುಪಾವತಿ ಮಾಡಲು ಆಸಕ್ತಿ ವಹಿಸದೆ ಇರಬಹುದು. ಆದ್ದರಿಂದ, ಈಗಾಗಲೇ ತಿಳಿಸಿರುವಂತೆ ಪ್ರತಿ ತಾಲ್ಲೂಕಿಗೆ ವಾರದಲ್ಲಿ ಒಂದು ದಿನ ಹಾಗೂ ಸ್ಥಳವನ್ನು ನಿಗದಿಪಡಿಸಿಕೊಂಡು, ಆ ದಿನ ಕಡ್ಡಾಯವಾಗಿ ಜಿಲ್ಲಾ ವ್ಯವಸ್ಥಾಪಕರಾಗಲಿ ಆಥವಾ ಕಛೇರಿ ಸಿಬ್ಬಂದಿಯನ್ನು ನಿಯೋಜಿಸಿ ಮರುಪಾವತಿ ಸಂಗ್ರಹಿಸುವುದು. ಈ ಬಗ್ಗೆ ಎಲ್ಲಾ ಫಲಾನುಭವಿಗಳಿಗೆ ಪತ್ರ ಮುಖೇನ ತಿಳಿಸಬೇಕು. ಈ ರೀತಿ ಮರುಪಾವತಿ ಸಂಗ್ರಹಿಸುವ ಕಾರ್ಯ ನಿರ್ವಹಿಸಬೇಕು. ಜಿಲ್ಲಾ ವ್ಯವಸ್ಥಾಪಕರು ತಾಲ್ಲೂಕುವಾರು ಮರುಪಾವತಿ ಸಂಗ್ರಹಣ ದಿನಾಂಕಗಳ ಪಟ್ಟಿಯನ್ನು ಕಡ್ಡಾಯವಾಗಿ ಕೇಂದ್ರ/ವಿಭಾಗೀಯ ಕಛೇರಿ ಕಳುಹಿಸಬೇಕು.

**ವ್ಯವಸ್ಥಾಪಕ ನಿರ್ದೇಶಕರು.**